Swabhimani Sahakari

Pages : 28 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ
ರಜತ ಮಹೋತ್ಸವ 2025

Volume - 22
Issue - 03
March - 2025


ಮಾರ್ಚ್ 07
**ವಿಧಾನ ಮಂಡಳದಲ್ಲಿ ರಾಜ್ಯ ಬಜೆಟ್ ಮಂಡನೆ**

ಮಾರ್ಚ್ 08
**ಅಂತರರಾಷ್ಟ್ರೀಯ ಮಹಿಳಾ ದಿನ**

ಮಾರ್ಚ್ 15
**ಅಂತರರಾಷ್ಟ್ರೀಯ ಗ್ರಾಹಕ ಹಕ್ಕುಗಳ ದಿನ**



ಮಾರ್ಚ್ 14




ಮಾರ್ಚ್ 30




ಮಾರ್ಚ್ 31




ಸೌಹಾರ್ದ ಸಹಕಾರಿಗಳ ಸಂಖ್ಯೆ: 6451

ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1706



ಜಿ. ನಂಜನಗೌಡ

**ಆತ್ಮೀಯ ಸಹಕಾರಿ ಬಂಧುಗಳಿಗೆ ಹೋಳಿ ಹಬ್ಬ ಹಾಗೂ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು. ಹೊಸ ವರುಷ ಹೊಸ ಹರುಷವನ್ನು ತರುವಂತಹ ಯುಗಾದಿ ತಮ್ಮೆಲ್ಲರ ಬಾಳಿನಲ್ಲಿ ಹೊಸ ಉತ್ಸಾಹದ ಚಿಲುಮೆಯನ್ನು ತರಲಿ. ಸುಖ ಶಾಂತಿ ಹಾಗೂ ನೆಮ್ಮದಿಯ ಬದುಕು ಎಲ್ಲರದಾಗಲಿ ಎಂದು ಶುಭ ಹಾರೈಸುತ್ತೇನೆ.**

## ಸೌಹಾರ್ದ ಸಹಕಾರಿಗಳು ಬಹು ಉಪಯೋಗಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಸಮಾಜ ಮುಖಿಯಾಗುವುದು ಅಗತ್ಯ.

ಆತ್ಮೀಯ ಸಹಕಾರಿ ಬಂಧುಗಳಿಗೆ ಹೋಳಿ ಹಬ್ಬ ಹಾಗೂ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು. ಹೊಸ ವರುಷ ಹೊಸ ಹರುಷವನ್ನು ತರುವಂತಹ ಯುಗಾದಿ ತಮ್ಮೆಲ್ಲರ ಬಾಳಿನಲ್ಲಿ ಹೊಸ ಉತ್ಸಾಹದ ಚಿಲುಮೆಯನ್ನು ತರಲಿ. ಸುಖ ಶಾಂತಿ ಹಾಗೂ ನೆಮ್ಮದಿಯ ಬದುಕು ಎಲ್ಲರದಾಗಲಿ ಎಂದು ಶುಭ ಹಾರೈಸುತ್ತೇನೆ.

ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ನಾವು ನೀವುಗಳೆಲ್ಲ ತೊಡಗಿಸಿಕೊಂಡಿದ್ದೇವೆ. ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಹಾಗೂ ಬೃಹತ್ ಚಟುವಟಿಕೆಗಳನ್ನು ಹಾಗೂ ಸಾಮರ್ಥ್ಯವನ್ನು ಗಮನಿಸಿದ ಕೇಂದ್ರ ಸರಕಾರ ಸಹಕಾರಿ ಕ್ಷೇತ್ರವನ್ನು ದೇಶದ ಅರ್ಥವ್ಯವಸ್ಥೆಯನ್ನು ಮುಖ್ಯ ವಾಹಿನಿಯಲ್ಲಿ ಗುರುತಿಸಲು ಸಾಧ್ಯವಾಗುವಂತೆ ಕೇಂದ್ರದಲ್ಲಿ ಸಹಕಾರ ಕ್ಷೇತ್ರಕ್ಕೆ ಮಾನ್ಯತೆ ನೀಡಿ "ಸಹಕಾರದಿಂದ ಸಮೃದ್ಧಿ" ಎಂಬ ಘೋಷಣೆಯೊಂದಿಗೆ ಸಹಕಾರ ಸಚಿವಾಲಯವನ್ನು ಪ್ರಾರಂಭಿಸಿರುವುದು ತಮಗೆಲ್ಲ ತಿಳಿದಿದೆ. ಕೇಂದ್ರ ಸಹಕಾರ ಸಚಿವಾಲಯ ರಾಷ್ಟ್ರೀಯ ಸಹಕಾರ ನೀತಿ, ರಾಷ್ಟ್ರೀಯ ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆ, ಹಲವು ರಾಷ್ಟ್ರಮಟ್ಟದ ಸಹಕಾರ ಸಂಸ್ಥೆಗಳ ಸ್ಥಾಪನೆ, ಕೃಷಿ ಪತ್ತಿನ ಸಹಕಾರ ಸಂಸ್ಥೆಗಳನ್ನು ಕಂಪ್ಯೂಟ-ರೀಕರಣ ಮಾಡುತ್ತಿರುವುದು, ಎಲ್ಲ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಲ್ಲಿ ಏಕರೂಪ ಲೆಕ್ಕಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಿಸುತ್ತಿರುವುದು, ರಾಷ್ಟ್ರಮಟ್ಟದಲ್ಲಿ ಸಹಕಾರ ಮಾಹಿತಿ ಸಂಗ್ರಹಣ ವ್ಯವಸ್ಥೆ ತಂದಿರುವುದು, (ಸಹಕಾರಿ ಡಾಟಾ ಬ್ಯಾಂಕ್) ರಾಷ್ಟ್ರಮಟ್ಟದಲ್ಲಿ ಬೃಹತ್ ಉಗ್ರಾಣ ವ್ಯವಸ್ಥೆ, ಸಹಕಾರಿ ಸಂಸ್ಥೆಗಳು ಬಹು ಉಪಯೋಗಿ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವಂತೆ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದನ್ನು ತಾವು ಗಮನಿಸಿರಬಹುದು.

ಪ್ರಸ್ತುತ ನಮ್ಮ ರಾಜ್ಯದ ಸೌಹಾರ್ದ ಸಹಕಾರಿಗಳು ಕೇಂದ್ರ ಸರಕಾರದ ಈ ಪ್ರಗತಿಪರ ಕಾರ್ಯಚಟುವಟಿಕೆಗಳನ್ನು ಗಮನಿಸಿ ನಾವು ಸಹ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಮತ್ತು ದೇಶದ ಅರ್ಥವ್ಯವಸ್ಥೆಯಲ್ಲಿ ಪಾಲುದಾರರಾಗಬೇಕೆನ್ನುವುದು ಸಂಯುಕ್ತ ಸಹಕಾರಿಯ ಆಶಯ.

ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರು ಈ ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವದ ಹಾಗೂ ಅಂತರ ರಾಷ್ಟ್ರೀಯ ಸಹಕಾರಿ ವರ್ಷದ ಸಂದರ್ಭದಲ್ಲಿ ತಮ್ಮ ವ್ಯಾಪ್ತಿಯಲ್ಲಿ ಬರುವ ಸ್ವಾಭಾವಿಕ ಸಂಪನ್ಮೂಲಗಳ ಬಳಕೆ, ಮಾನವ ಸಂಪನ್ಮೂಲಗಳ ಸದ್ಬಳಕೆ, ಪರಿಸರ ಸಂರಕ್ಷಣೆ, ಶಿಕ್ಷಣ ಹಾಗೂ ಆರೋಗ್ಯ ರಕ್ಷಣೆಗಾಗಿ, ಮಹಿಳೆಯರನ್ನು ಹಾಗೂ ಯುವಕರನ್ನು ಈ ಕ್ಷೇತ್ರದಲ್ಲಿ ಬರಮಾಡಿಕೊಳ್ಳುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಈ ರೀತಿಯ ಇನ್ನೂ ಅನೇಕ ನೂತನ ಯೋಜನೆಗಳನ್ನು ಹಾಕಿಕೊಂಡು ಅನುಷ್ಠಾನಗೊಳಿಸುವುದು ಅವಶ್ಯಕ. ಎಲ್ಲಾ ಸದಸ್ಯ ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಹಾಗೂ ಸಂಬಂಧಿಸಿದ ತಜ್ಞರುಗಳನ್ನು ಹಾಗೂ ಅನುಭವಿಗಳನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದುಕೊಳ್ಳುವುದರಿಂದ ಹಾಗೂ ಅವುಗಳ ಅನುಷ್ಠಾನಕ್ಕೆ ಮಾರ್ಗದರ್ಶನ ಪಡೆಯುವುದರಿಂದ ಸಹಕಾರಿ ವ್ಯವಸ್ಥೆ ದೇಶದ ಅರ್ಥವ್ಯವಸ್ಥೆಯ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ನಾವು ಸಹಕರಿಸೋಣ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

### ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......... 05–10
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......... 11–16
**ಲೇಖನಗಳು :**
ಬ್ಯಾಂಕಿನಲ್ಲಿ ನಾಮಿನಿ ಎಂದರೇನು? ಮತ್ತು ಅದರ ಪ್ರಯೋಜನಗಳು .......... 17–19
ಸಹಕಾರ ತತ್ವದ ಉಗಮ, ಸ್ವರೂಪ ಮತ್ತು ಸಂಘಟನೆ .......... 22
ಮಹಿಳೆಯ ಬದುಕೇ ಸ್ವಾವಲಂಬನೆಗೆ ಪ್ರತೀಕ .......... 27–28

# ಸಂಪಾದಕೀಯ

## ಯುವಕರು ಸಹಕಾರ ಕ್ಷೇತ್ರದಿಂದ ಆಕರ್ಷಿತರಾಗುವಂತೆ ಮಾಡುವುದು ಸಹಕಾರಿಗಳ ಜವಾಬ್ದಾರಿ.

ಆತ್ಮೀಯರೇ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಲವಾರು ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಯುವಕರು ಹಾಗೂ ಸಹಕಾರ ಎಂಬ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ. ಪ್ರತಿ ಕಾರ್ಯಕ್ರಮದಲ್ಲಿ ಸರಾಸರಿ 300ಕ್ಕೂ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕಾರ ಕ್ಷೇತ್ರದ ಬಗ್ಗೆ ಮಾಹಿತಿ ಪಡೆಯುವಂತಾಗಿದೆ. ಪ್ರತಿ ವಿಶ್ವವಿದ್ಯಾಲಯದಲ್ಲಿ ಕ್ಯಾಂಪಸ್ಸ್ ಸಹಕಾರ ಸಂಘಗಳನ್ನು ಸ್ಥಾಪಿಸಲು ಕ್ರಮವಿಡುತ್ತಿರುವುದು ಹಾಗೂ ಸದರಿ ಸಂಘ ಸ್ಥಾಪನೆಗೆ ಸಂಯುಕ್ತ ಸಹಕಾರಿ ಮಾರ್ಗದರ್ಶನ ನೀಡುತ್ತಿರುವುದು ಸಹಕಾರಿ ಕ್ಷೇತ್ರದಲ್ಲಿ ಯುವಕರನ್ನು ಹಾಗೂ ಮಹಿಳೆಯರನ್ನು ಸ್ವಾಗತಿಸುವ ನಿಟ್ಟಿನಲ್ಲಿ ಉತ್ತಮ ಪ್ರಯತ್ನ ಇದಾಗಿದೆ.

ಈ ಪ್ರಯತ್ನವು ಸಾಕಾರವಾಗಬೇಕಾದರೆ ಸಂಯುಕ್ತ ಸಹಕಾರಿಯ ಪ್ರಯತ್ನದಲ್ಲಿ ರಾಜ್ಯದ ಸಹಕಾರಿಗಳು ಹಾಗೂ ಅಧಿಕಾರಿಗಳು ಕೈಜೋಡಿಸುವುದು ಅಗತ್ಯವೆನಿಸುತ್ತದೆ. ಸಹಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲಾ ಕಾಲೇಜುಗಳಲ್ಲಿ, ಯುವ ಸಂಘಟನೆಗಳಲ್ಲಿ ತಮ್ಮ ಅಸ್ತಿತ್ವದ ಬಗ್ಗೆ ಹಲವು ವಿಧವಾದ ಸಂಪರ್ಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಸಮಾಜದ ಅಭಿವೃದ್ಧಿಯಲ್ಲಿ, ಪರಿಸರ ಸಂರಕ್ಷಣೆಯಲ್ಲಿ, ಶಿಕ್ಷಣ ಹಾಗೂ ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳಲ್ಲಿ ಸಹಕಾರಿ ಸಂಸ್ಥೆಗಳು ಪ್ರಮುಖ ಪಾತ್ರವನ್ನು ನಿರ್ವಹಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಸಮಗ್ರ ಕ್ರೀಯಾ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸುವುದು ಸಾಧ್ಯ.

ಯುವಕರಿಗೆ ಸಹಕಾರಿ ಕ್ಷೇತ್ರದಲ್ಲಿ ಆಕರ್ಷಣೆ ಬರಬೇಕಾದರೆ ಸಹಕಾರಿ ಕ್ಷೇತ್ರದ ಸಾಧನೆಗಳ ಬಗ್ಗೆ ಹೆಚ್ಚಿನ ಪ್ರಚಾರ ಮಾಡಬೇಕಾಗುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ವರ್ಷ ಇದಾಗಿದೆ. ವಿಶ್ವ ಸಂಸ್ಥೆಯವರು ಎರಡನೇಯ ಬಾರಿಗೆ ಘೋಷಿಸಿರುವ ಅಂತರ ರಾಷ್ಟ್ರೀಯ ಸಹಕಾರಿ ವರ್ಷ ಇದಾಗಿದೆ. ಸಹಕಾರ ಕ್ಷೇತ್ರದ ಬಗ್ಗೆ ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರೂ ಸಹಕಾರ ಸಂಸ್ಥೆಗಳು ಕಷ್ಟ ಕಾಲದಲ್ಲಿಯೂ ಉತ್ತಮವಾಗಿ ಕೆಲಸ ಮಾಡುತ್ತವೆ. ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಎಂಬುದಾಗಿ ಘೋಷಣೆ ಮಾಡಿದೆ. ವಿವಿಧ ದೇಶಗಳಲ್ಲಿ ಸಹಕಾರ ಕ್ಷೇತ್ರದ ಮೂಲಕ ಕಾರ್ಯನಿರ್ವಹಿಸುತ್ತಿರುವ ಹಲವು ವಿಧವಾದ ಸಾಧನೆಗಳು, ಸಹಕಾರಿ ಕ್ಷೇತ್ರದ ಹುಟ್ಟು ಹಾಗೂ ಬೆಳವಣಿಗೆ, ಸಹಕಾರ ತತ್ವಗಳ ಅನುಷ್ಠಾನದಿಂದ ಆಗಿರುವ ಪ್ರಗತಿ, ಸಹಕಾರ ಕ್ಷೇತ್ರದ ಮೂಲಕ ಉದ್ಯೋಗ ಸೃಷ್ಟಿ, ಸಹಕಾರ ಕ್ಷೇತ್ರದ ಮೂಲಕ ಯುವಕರಲ್ಲಿ ನಾಯಕತ್ವದ ಅಭಿವೃದ್ಧಿ, ಸಹಕಾರ ಕ್ಷೇತ್ರದ ಮೂಲಕ ಸಾಮಾಜಿಕ ಅಭಿವೃದ್ಧಿ, ಕೇಂದ್ರದಲ್ಲಿ ಇದಕ್ಕಾಗಿಯೇ ಸಹಕಾರ ಸೇ ಸಮೃದ್ಧಿ ಎಂಬ ಘೋಷಣೆಯೊಂದಿಗೆ ಪ್ರತ್ಯೇಕ ಸಹಕಾರ ಸಚಿವಾಲಯ ರಚನೆಯಾಗಿರುವುದು, ಸಹಕಾರ ಸಚಿವಾಲಯದ ಮೂಲಕ ಅನೇಕ ಪ್ರಗತಿಪರ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಮಾಹಿತಿ ನೀಡಿ ಸಹಕಾರ ಕ್ಷೇತ್ರದಲ್ಲಿ ಯುವಕರು ಸಕ್ರೀಯವಾಗಿ ಪಾಲ್ಗೊಳ್ಳುವಂತೆ ಮಾಡುವಲ್ಲಿ ಸಹಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡುವುದು ಅಗತ್ಯ. ಸಹಕಾರಿ ಕ್ಷೇತ್ರದಲ್ಲಿ ಯುವ ಸಹಕಾರಿ ನಾಯಕತ್ವ ಸೃಷ್ಟಿಗೆ ಕಾರಣರಾಗೋಣ. ಯುವಕರಿಗೆ ಈ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಕಾರಣರಾಗೋಣ ಸಹಕಾರ ಕ್ಷೇತ್ರವನ್ನು ಈ ದೇಶದ ಅರ್ಥವ್ಯವಸ್ಥೆಯಲ್ಲಿ ಮುಖ್ಯವಾಹಿನಿಯಲ್ಲಿ ತರಲು ಕೇಂದ್ರ ಸಹಕಾರ ಸಚಿವಾಲಯದ ಪ್ರಯತ್ನದಲ್ಲಿ ನಾವುಗಳು ಭಾಗಿಗಳಾಗೋಣ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಅಧ್ಯಾತ್ಮ"

'ಅಧ್ಯಾತ್ಮ' ಬಹಳ ಸುಂದರವಾದ ಶಬ್ದ, ಧರ್ಮ ಕ್ಷೇತ್ರದಲ್ಲಿ ಹೆಚ್ಚು ಬಳಕೆಯಾದ ಶಬ್ದ. ಎಲ್ಲ ಧರ್ಮಗ್ರಂಥಗಳಲ್ಲಿಯೂ ಇದರ ಪ್ರಸ್ತಾಪವಿದೆ. ಅಧ್ಯಾತ್ಮ ಕುರಿತಾದ ಶಿಷ್ಯನ ಏಳು ಪ್ರಶ್ನೆಗಳಲ್ಲಿ ಅತ್ಯಂತ ಮಹತ್ವದ್ದು "ಅಧ್ಯಾತ್ಮ" ಎಂದರೇನು?" ಅದಕ್ಕೆ ಗುರು ಉತ್ತರಿಸುತ್ತಾನೆ – "ಸ್ವಭಾವ ಅಧ್ಯಾತ್ಮಮ್' ಯಾವುದು ಈ ಜಗತ್ತಿನಲ್ಲಿ ಪರಮಸತ್ಯವೋ ಅದೇ ಸ್ವಭಾವ. ಈ ಸ್ವಭಾವ ತತ್ತ್ವ ಎಲ್ಲರಲ್ಲಿದೆ. ಆ ತತ್ತ್ವವೇ ಅಧ್ಯಾತ್ಮ. ಈ ಸತ್ಯ ಎಲ್ಲೆಡೆ ಇದೆ. ಅದು ಕಾಲದೇಶಗಳನ್ನು ಮೀರಿ ಇರುತ್ತದೆ. ಅದರ ವ್ಯಾಪ್ತಿಗೆ ಮಿತಿಯಿಲ್ಲ. ಆ ಸತ್ಯ ಹೊರಗಡೆ ಮಾತ್ರವಲ್ಲ. ಎಲ್ಲರ ಒಳಗೂ ಇದೆ. ಈ ಸತ್ಯದ ಸ್ವರೂಪವೇನು? ಯಾವುದು ಎಲ್ಲವನ್ನೂ ಅರಿತುಕೊಳ್ಳುತ್ತದೆಯೋ ಅದೇ ಸತ್ಯ. ಯಾವುದು ಅರಿವಿನ ವಸ್ತುವೋ ಅದು ಅಧ್ಯಾತ್ಮ. ಅದರ ಬೆಳಕಿನಲ್ಲಿ ಎಲ್ಲ ವಸ್ತುಗಳನ್ನು ಕಾಣುತ್ತವೆ.

ಆಚಾರ್ಯ ಶಂಕರರು ಮಹಾಜ್ಞಾನಿ. ಅವರು ಈ ದೇಶದ ತುಂಬೆಲ್ಲ ಸಂಚರಿಸಿ ಅದ್ವೈತವನ್ನು ಹರಡಿದರು. ಎಂತಹ ವಿದ್ವಾಂಸರೂ ಅವರ ವಾದವನ್ನು ಒಪ್ಪುತ್ತಿದ್ದರು. ಅಂತಹ ಮಹಾನ್ ಶಂಕರ ಒಂದು ದಿನ ಹೊಲವೊಂದರಲ್ಲಿ ಗಿಡದ ಕೆಳಗೆ ಕುಳಿತು ವಿಶ್ರಮಿಸುತ್ತಿದ್ದರು. ಆ ಹೊಲದ ಮಾಲೀಕ ಒಬ್ಬ ವಯಸ್ಸಾದ ರೈತ. ಅವನಿಗೆ ಶಂಕರರ ಮುಖತಃ ಪರಿಚಯ ಇರಲಿಲ್ಲ. ಅವನು ಶಂಕರರನ್ನು ಒಬ್ಬ ಸಂತ ಎಂದು ಭಾವಿಸಿ, ಅವರಿಗೆ ಕಂಬಳಿ ಹಾಸಿದ. ಹಣ್ಣು ಹಂಪಲಗಳನ್ನು, ತಂಪಾದ ನೀರನ್ನು ಕೊಟ್ಟ. ಶಂಕರರು ಅವನ ಆತಿಥ್ಯದಿಂದ ಸಂತಸಪಟ್ಟರು. ಆ ರೈತನ ಒಳ್ಳೆಯ ಗುಣಕ್ಕೆ ಮಾರು ಹೋದರು. ಅವರು ರೈತನಿಗೆ, "ನಿನಗೇನು ಬೇಕು? ಹೇಳು ಎಂದರು. ರೈತ "ನೀನು ಯಾರು?" ಎಂದು ಕೇಳಿದ. "ನಾನು ಆಚಾರ್ಯ ಶಂಕರ" ಎಂದು ಹೇಳಿದರು. ಆಗ ರೈತನಿಗೆ ಅತೀವ ಸಂತಸವಾಯಿತು. ಯಾರ ಬಗ್ಗೆ ಅವನು ಬರೀ ಕೇಳಿದ್ದನೋ ಅವರನ್ನು ಇಂದು ತನ್ನೆದುರು ಪಡೆದಿದ್ದನು. "ನಿಮ್ಮನ್ನು ಕಾಣುವುದೇ ಒಂದು ಭಾಗ್ಯ! ನಿಮ್ಮ ಬಗ್ಗೆ ಬಹಳ ಕೇಳಿದ್ದೇನೆ. ತಾವು ಮಹಾಜ್ಞಾನಿಗಳಂತೆ, ಎಲ್ಲವನ್ನೂ ಬಲ್ಲವರಂತೆ. ನನ್ನದೊಂದು ಚಿಕ್ಕ ಪ್ರಶ್ನೆ. ಮುಕ್ತನಾಗುವುದು ಹೇಗೆ? ನನಗೆ ಅಧ್ಯಾತ್ಮದ ಬಗ್ಗೆ ಏನೂ ಗೊತ್ತಿಲ್ಲ. ಆದರೆ ಮುಕ್ತನಾಗುವುದು ಹೇಗೆ? ಆದರೆ ಮುಕ್ತನಾಗುವ ಹಂಬಲವಿದೆ. ಅದು ಹೇಗೆ ಎಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳಿ" ಎಂದ ರೈತ. ಆಚಾರ್ಯರು ಸಂದಿಗ್ಧದಲ್ಲಿ ಬಿದ್ದರು. ಏನೂ ಗೊತ್ತಿಲ್ಲದವನಿಗೆ ಒಂದೆರಡು ಮಾತುಗಳಲ್ಲಿ ಮುಕ್ತಿಯನ್ನು ಹೇಗೆ ಒದಗಿಸುವುದು? ಎಂಬ ಪೇಚಿನಲ್ಲಿ ಬಿದ್ದರು. 'ನಿನಗೇನೂ ಗೊತ್ತಿಲ್ಲ ಎಂದು ಹೇಳುತ್ತಿದ್ದೀಯ. ನಾನು ಒಂದೆರಡು ಮಾತುಗಳಲ್ಲಿ ಅದು ಹೇಗೆ ನಿನಗೆ ಮುಕ್ತಿಯ ಬಗ್ಗೆ ಹೇಳಲಿ?" ಎಂದರು. ಆಗ ರೈತ "ನನ್ನಲ್ಲಿ ಕೇಳುವ ಅದಮ್ಯ ಇಚ್ಛೆ ಇದೆ. ನಿಮ್ಮಲ್ಲಿ ಅಪಾರ ಜ್ಞಾನವಿದೆ. ನೀವು ಹೇಳಿದ್ದರಲ್ಲಿ ಸತ್ಯ ಇದ್ದರೆ ನಾನು ಮುಕ್ತನಾಗುತ್ತೇನೆ. ನಿಮ್ಮ ದಾರಿಯನ್ನು ನಾನು ಹದಿನೈದು ವರ್ಷಗಳಿಂದ ಕಾಯುತ್ತಿದ್ದೇನೆ. ಹೇಳಿ ಎಂದ. ಶಂಕರರು ಸಂತಸಗೊಂಡರು. ಆ ರೈತನ ಸ್ವಚ್ಛ ಮನಸ್ಸು ಅವರನ್ನು ಕಟ್ಟಿಹಾಕಿತು. ಅಧ್ಯಾತ್ಮಕ್ಕೆ ಮೊದಲು ಮನಸ್ಸು ಸ್ವಚ್ಛವಾಗಿರಬೇಕು. ಆಗ ಶಂಕರರು ರೈತನಿಗೆ, "ಎರಡು ನಿಮಿಷಗಳಲ್ಲಿ ಮುಕ್ತಿ ಪಡೆಯಲು ಬಯಸಿದವನೆಂದರೆ ನೀನೊಬ್ಬನೇ!

ರೈತ ಆನಂದಭಾಷ್ಪ ಸುರಿಸಿದ. ಎರಡು ನಿಮಿಷಗಳಲ್ಲಿ ಕೇವಲ ಐದು ಪ್ರಶ್ನೆಗಳನ್ನು ಕೇಳುವುದರೊಳಗಾಗಿ ಅವನು ಮುಕ್ತನಾಗಿದ್ದ! ಮುಕ್ತನಾಗಬೇಕಾದರೆ ಮೊದಲು ಸ್ವಚ್ಛ ಮನಸ್ಸಿರಬೇಕು. ಆಗ ರೈತ, "ಆಚಾರ್ಯರೇ, ಇಷ್ಟನ್ನು ತಿಳಿಯಬೇಕಾದರೆ ಎಲ್ಲರೂ ಏಕೆ ಅಷ್ಟು ಕಷ್ಟಪಡುತ್ತಾರೆ? ಇದನ್ನು ಎರಡು ನಿಮಿಷಗಳಲ್ಲಿ ತಿಳಿಯಬಹುದು' ಎಂದ ಆಗ ಶಂಕರರು, "ನಿನ್ನಂತೆ ಎಲ್ಲರೂ ಇರಬೇಕಲ್ಲ!" ಎಂದರು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 9272 | 1126 | 1660 | 886 | 12944 |
| 2 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 6757 | 886 | 1118 | 554 | 9315 |
| 3 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 2515 | 240 | 542 | 332 | 3629 |
| **ಫೆಬ್ರವರಿ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 324 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 466** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6897 | 1152 | 2073 | 727 | 10849 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 976 | 210 | 479 | 151 | 1816 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5921 | 942 | 1594 | 576 | 9033 |
| **ಫೆಬ್ರವರಿ ತಿಂಗಳಿನಲ್ಲಿ ಒಟ್ಟು 165 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# ಪಟ್ಟಣ ಸಹಕಾರ ಬ್ಯಾಂಕುಗಳಿಗಾಗಿ ವಿಶೇಷ ಕಾರ್ಯಕ್ರಮಗಳು

## ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಶಿಬಿರ





ಉದ್ಘಾಟನೆ

**ಕಾರವಾರ :** ದಿನಾಂಕ 18 ಹಾಗೂ 19 ರಂದು ಕಾರವಾರದ ಸ್ವರ್ಲಿಂಗ್ ಹಾಲಿಡೇಸ್ ರೆಸಾರ್ಟ್‌ನಲ್ಲಿ 2 ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ 10 ಬ್ಯಾಂಕುಗಳಿಂದ 26 ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ 10 ಅಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ ಆರ್. ದೇಶಪಾಂಡೆಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಹಾಗೂ ವಿಧಾನ ಪರಿಷತ ಮಾಜಿ ಸದಸ್ಯರು ಶ್ರೀ ಮನೋಹರ ಮಸ್ಕಿಯವರು, ವಿಕಾಸ್ ಸೌಹಾರ್ದ ಸಹಕಾರಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠರವರು, ಕಾರವಾರ ಜಿಲ್ಲೆ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕರವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ವಿಜಯಾ ಬ್ಯಾಂಕಿನ ನಿವೃತ್ತ ಅಧಿಕಾರಿ ಶ್ರೀ ರತ್ನಾಕರ ಹೆಗಡೆರವರು, ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿ ಶ್ರೀ ಹೆಚ್.ಎಮ್. ಬಸವರಾಜರವರು, ಅಂಬ್ರೆಲ್ಲಾ ಆರ್ಗನೈಜೇಷನ್ ಫಾರ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಮುಂಬೈಯಿಂದ ಶ್ರೀ ಪದ್ಮಭೂಷಣ ಮತ್ತು ಪಿಯೂಷ ಮಿಸ್ತ್ರಿಯವರು, ಶ್ರೀ ಹರಿಕೃಷ್ಣ ನಿವೃತ್ತ ರಿಸರ್ವ ಬ್ಯಾಂಕ ಅಧಿಕಾರಿಯವರು ಆನ್‌ಲೈನ್‌ನಲ್ಲಿ ರಿಸ್ಕ ಮೆನೆಜಮೆಂಟ್ ವಿಷಯದ ಕುರಿತು ಶ್ರೀ ಎನ್. ದರ್ಶನರವರು ವಿಷಯದ ನಿರ್ವಹಣೆ ಮಾಡಿದರು. ಕಾರ್ಯಕ್ರಮ ಬಹಳ ಚೆನ್ನಾಗಿತ್ತೆಂದು ಭಾಗವಹಿಸಿದ ಪ್ರತಿನಿಧಿಗಳು ಅಭಿಪ್ರಾಯ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕರು ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮ ದಿನಾಂಕ 19 ಹಾಗೂ 20 ಈ ಎರಡು ದಿನಗಳಲ್ಲಿ ಸ್ವರ್ಲಿಂಗ್ ಹಾಲಿಡೇಸ್ ರೆಸಾರ್ಟ್‌ನಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಜಿ. ನಂಜನಗೌಡ ಮಾನ್ಯ ಅಧ್ಯಕ್ಷರು, ಸಂಯುಕ್ತ ಸಹಕಾರಿ ಇವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ 8 ಸಹಕಾರಿ ಬ್ಯಾಂಕುಗಳಿಂದ 23 ಸಿಬ್ಬಂದಿಯವರು ಸಂಯುಕ್ತ ಸಹಕಾರಿಯ 10 ಅಧಿಕಾರಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಅಖಿಲ ಭಾರತ ಬ್ಯಾಂಕುಗಳ ತರಬೇತಿ ಕಾಲೇಜಿನ ಉಪನ್ಯಾಸಕರಾದ ಶ್ರೀ ಎನ್ ದರ್ಶನ್, ಸುಕೋ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಮೋಹಿತ ಮಸ್ಕಿ, ಕೆನರಾ ಬ್ಯಾಂಕ ನಿವೃತ್ತ ಅಧಿಕಾರಿ ಶ್ರೀ ಹೆಚ್.ಎಮ್ ಬಸವರಾಜುರವರು ಮತ್ತು ಶ್ರೀ ರತ್ನಾಕರ ಹೆಗಡೆರವರು ಮತ್ತು ಅಂಬ್ರೆಲ್ಲಾ ಆರ್ಗನೈಜೇಷನ್ ಫಾರ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ ಮುಂಬೈಯಿಂದ ಶ್ರೀ ಪದ್ಮಭೂಷಣ ಮತ್ತು ಪಿಯೂಷ ಮಿಸ್ತ್ರಿಯವರು, ಶ್ರೀ ಹರಿಕೃಷ್ಣ ನಿವೃತ್ತ ರಿಸರ್ವ ಬ್ಯಾಂಕ ಅಧಿಕಾರಿಯವರು ಆನ್‌ಲೈನ್‌ನಲ್ಲಿ ರಿಸ್ಕ ಮೆನೆಜಮೆಂಟ್ ವಿಷಯ ಮಂಡನೆ ಮಾಡಿದರು.

### ಪಟ್ಟಣ ಸಹಕಾರ ಬ್ಯಾಂಕುಗಳ ಸಾಧನೆ ಉತ್ತಮವಾಗಿದೆ ಶ್ರೀ ಜಿ. ನಂಜನಗೌಡ

ಕಾರ್ಯಕ್ರಮಗಳ ಉದ್ಘಾಟನೆಯನ್ನು ನೆರವೇರಿಸಿದ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ರಾಜ್ಯದಲ್ಲಿ 17 ಸೌಹಾರ್ದ ಸಹಕಾರಿ ಬ್ಯಾಂಕುಗಳು ನಮ್ಮ ವ್ಯಾಪ್ತಿಗೆ ಬರುತ್ತವೆ. ಅವುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಬ್ಯಾಂಕುಗಳ ಪದಾಧಿಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ಅವರನ್ನು ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾಹಿತಿ ನೀಡಿ ಅವರ ಆಡಳಿತ ಕೌಶಲ್ಯವನ್ನು ಹೆಚ್ಚಿಸುವುದಕ್ಕಾಗಿ ಈ ತರಬೇತಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸುಕೋ ಬ್ಯಾಂಕ್ ಸಂಸ್ಥಾಪಕ ಅಧ್ಯಕ್ಷರು ಹಾಗೂ ವಿಧಾನ ಪರಿಷತ ಮಾಜಿ ಸದಸ್ಯರಾದ ಶ್ರೀ ಮನೋಹರ ಮಸ್ಕಿಯವರು, ವಿಕಾಸ ಬ್ಯಾಂಕ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠರವರು ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕಗಳಿಗೆ ಸಂಯುಕ್ತ ಸಹಕಾರಿಯವರು ಉತ್ತಮ ತರಬೇತಿ ವ್ಯವಸ್ಥೆಯನ್ನು ಮಾಡಿದ್ದಾರೆ ಎಲ್ಲರೂ ಇದರ ಪ್ರಯೋಜನ ಪಡೆಯಲು ತಿಳಿಸಿದರು.

ಪ್ರಾರಂಭದಲ್ಲಿ ಸಾಂಪ್ರದಾಯಿಕವಾಗಿ ಸೇಂಟ್ ಮಿಲಾಗ್ರೇಸ್ ಸಿಬ್ಬಂದಿಯವರಿಂದ ಪ್ರಾರ್ಥನೆಯಾದ ನಂತರ ತರಬೇತಿ ಅಧಿಕಾರಿ ಶ್ರೀ ಶಿವಕುಮಾರ ಬಿರಾದಾರರವರು ಸ್ವಾಗತಿಸಿದರು.

ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಪ್ರಾಸ್ತಾವಿಕವಾಗಿ ಮಾತನಾಡಿ ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಯವರಿಗಾಗಿ ಪ್ರತ್ಯೇಕವಾಗಿ

ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿ ಏರ್ಪಡಿಸುತ್ತ ಬಂದಿದೆ. ಅವರುಗಳಿಗೆ ಬೇಕಾಗುವ ವಿಷಯಗಳನ್ನು ಆಯ್ಕೆ ಮಾಡಲಾಗುತ್ತದೆ. ಅವರು ಸಲಹೆ ನೀಡುವ ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸದ ವ್ಯವಸ್ಥೆಗಳನ್ನು ಮಾಡಲಾಗುತ್ತದೆ. ತರಬೇತಿ ಕಾರ್ಯಕ್ರಮ ಉತ್ತಮವಾಗಿ ನಡೆಯಲು ಎಲ್ಲರೂ ತಮ್ಮ ಸಲಹೆ ಸಹಕಾರ ಹಾಗೂ ಮಾರ್ಗದರ್ಶನ ನೀಡಲು ಕೋರಿದರು. ಕೊನೆಯಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀ ಗಂಗಾರಾಮರವರು ವಂದನಾರ್ಪಣೆ ಮಾಡಿದರು.

## "ಯುವಕರು ಹಾಗೂ ಸಹಕಾರ" ಸಂವಾದ ಕಾರ್ಯಕ್ರಮ




ಉದ್ಘಾಟನೆ



ಸಂವಾದ ಕಾರ್ಯಕ್ರಮ

**ಕಲಬುರಗಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ: 14.02.2025ರಂದು "ಯುವಜನ ಹಾಗೂ ಸಹಕಾರ" ಸಂವಾದ ಕಾರ್ಯಕ್ರಮವನ್ನು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳಾದ ಪ್ರೊ. ಬಟ್ಟು ಸತ್ಯನಾರಾಯಣ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಕಾರ್ಯಕ್ರಮದ ಪ್ರಸ್ತಾವಿಕವನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ನೆರವೇರಿಸಿದರು. ಸ್ವಾಗತವನ್ನು ಕೇಂದ್ರೀಯ ವಿಶ್ವವಿದ್ಯಾಲಯ ಸಾಮಾಜಿಕ ಕಾರ್ಯ ವಿಭಾಗದ ಮುಖ್ಯಸ್ಥರಾದ ಪ್ರೊ. ಪವಿತ್ರ ಆಲೂರವರು ನೆರವೇರಿಸಿದರು.

ಪ್ರಧಾನ ವಿಷಯ ಮಂಡನೆಯನ್ನು ಚಾಣಕ್ಯ ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳಾದ ಡಾ. ಯಶವಂತ ಡೋಂಗ್ರೆ ರವರು "ಯುವಜನ ಮತ್ತು ಸಹಕಾರ" ಕುರಿತು ಉಪನ್ಯಾಸವನ್ನು ನೀಡಿದರು. ಮುಖ್ಯ ಅತಿಥಿಗಳಾಗಿ ಕೇಂದ್ರೀಯ ವಿಶ್ವವಿದ್ಯಾಲಯದ ಮಾನ್ಯ ರೆಜಿಸ್ಟರ್‌ರಾದ ಪ್ರೊ. ಆರ್.ಆರ್. ಬಿರಾದರ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಮಾನ್ಯ ಉಪ ನಿರ್ದೇಶಕರಾದ ಶ್ರೀ ಸುಭಾಷ್ ಚಂದ್ರ ಬರ್ಮ, ಕೇಂದ್ರೀಯ ವಿಶ್ವವಿದ್ಯಾಲಯದ ಮಾನ್ಯ ಉಪನ್ಯಾಸಕರಾದ ಶ್ರೀ ಪಾಂಡುರಂಗ, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಸಂಜು ಮಹಾಜನ, ಕಲಬುರುಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಸ್. ಪಾಟೀಲ ರವರು ಉಪಸಿತರಿದ್ದರು. ಕಾರ್ಯಕ್ರಮದಲ್ಲಿ ತರಬೇತಿ ವಿಭಾಗದ ಮುಖ್ಯಸ್ಥರಾದ ಶ್ರೀ ವಿ.ಜೆ. ಕಾರಕೂನು, ತರಬೇತಿ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದರ ಮತ್ತು ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೀರಶೆಟ್ಟಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳಿಂದ ಒಟ್ಟು 275 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ಕಲಬುರಗಿ ಜಿಲ್ಲೆಯ ಹಿರಿಯ ಸೌಹಾರ್ದ ಸಹಕಾರಿಗಳೊಂದಿಗೆ ಸಂವಾದ ಕಾರ್ಯಕ್ರಮ :** ದಿನಾಂಕ 14.02.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಪ್ರಾಂತೀಯ ಕಛೇರಿಯ ಆವರಣದಲ್ಲಿ ಕಲಬುರಗಿ ಜಿಲ್ಲೆಯ ಹಿರಿಯ ಸೌಹಾರ್ದ ಸಹಕಾರಿಗಳೊಂದಿಗೆ ಸಂವಾದ ಕಾರ್ಯಕ್ರಮ ಜರುಗಿತ್ತು. ಕಾರ್ಯಕ್ರಮದ ಸ್ವಾಗತವನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರಾಕಲೇ ನಡೆಸಿಕೊಟ್ಟರು, ಪ್ರಸ್ತುತ ಸೌಹಾರ್ದ ಸಹಕಾರಿ ಚಳುವಳಿಯ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ ಕುಮಾರ ಮಾಹಿತಿ ನೀಡಿದರು. ಸೌಹಾರ್ದ ಕಾಯ್ದೆಗೆ ಸಂಬಂಧಿಸಿದ್ದಂತೆ ಇತ್ತಿಚಿನ ಬೆಳವಣಿಗಳು ರಾಜ್ಯ ಸರ್ಕಾರದ ನಿಲುವುಗಳು ಮತ್ತು ಸಂಯುಕ್ತ ಸಹಕಾರಿಯ ನಡೆಯ ಕುರಿತು ಮಾಹಿತಿ ನೀಡಿದರು. ಚಾಣಕ್ಯ ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳಾದ ಡಾ. ಯಶ್ವಂತ್ ಡೋಂಗ್ರೆ, ಇವರು ಅಂತರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಚಳುವಳಿ ಹಾಗೂ ಸಹಕಾರಕ್ಕೆ ಸಂಬಂಧಿಸಿದ್ದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿಲುವುಗಳ ಕುರಿತು ಮಾಹಿತಿ ಹಂಚಿಕೊಂಡರು. ಸದರಿ ಸಂವಾದದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ, ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ್, ಕಲಬುರಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್, ತರಬೇತಿ ಅಧಿಕಾರಿಗಳಾದ ಶ್ರೀ ವಿ.ಜೆ ಕಾರಕೂನ್, ಶ್ರೀ ಶಿವಕುಮಾರ ಬಿರಾದರ, ಒಕ್ಕೂಟದ ನಿರ್ದೇಶಕರು ಹಿರಿಯ ಸಹಕಾರಿಗಳು ಭಾಗವಹಿಸಿದರು.

# ಸಹಕಾರ ಇಲಾಖೆಯ ನೂತನ ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀ ಪಿ. ಮನಿವಣ್ಣನ್



**ಬೆಂಗಳೂರು :** ದಿನಾಂಕ 25.02.2025 ರಂದು ಸಹಕಾರ ಇಲಾಖೆಯ ನೂತನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ಮನಿವಣ್ಣನ್ ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ಮಾಡಿ ಸೌಹಾರ್ದ ಸಹಕಾರಿ ಕಾಯ್ದೆ ಪುಸ್ತಕ ನೀಡಿ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ವಿವರಿಸಲಾಯಿತು. ನಂತರ ಮಾತನಾಡಿದ ಶ್ರೀ ಪಿ. ಮನಿವಣ್ಣನ್ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸೌಹಾರ್ದ ಸಹಕಾರಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಶ್ರೀಯುತರನ್ನು ಸನ್ಮಾನಿಸಲಾಯಿತು.



ಉದ್ಘಾಟನೆ



ಸಂವಾದ ಕಾರ್ಯಕ್ರಮ

**ತುಮಕೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಸಂಯುಕ್ತಾಶ್ರಯದಲ್ಲಿ "ಯುವಜನ ಹಾಗೂ ಸಹಕಾರ ಸಂವಾದ" ಕಾರ್ಯಕ್ರಮವನ್ನು ದಿನಾಂಕ : 07.02.2025ರಂದು ಶುಕ್ರವಾರ, ಬೆಳಿಗ್ಗೆ : 10.00 ಗಂಟೆಗೆ, ಸ್ಥಳ : ಸರ್.ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರುನಲ್ಲಿ ನಡೆದ ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರೊ. ಎಂ. ವೆಂಕಟೇಶ್ವರಲು ಮಾನ್ಯ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, ಅಧ್ಯಕ್ಷತೆಯನ್ನು ಶ್ರೀ ಸಿ.ಪಿ. ವಿಜಯ ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸ್ವಾಗತ & ಪ್ರಾಸ್ತಾವಿಕ ನುಡಿಯನ್ನು ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ. ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ನೆರವೇರಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರೊ. ಪ್ರಸನ್ನಕುಮಾರ್ ಕೆ. ಕುಲಸಚಿವರು (ಪರೀಕ್ಷಾಂಗ) ತುಮಕೂರು ವಿಶ್ವವಿದ್ಯಾನಿಲಯ, ಪ್ರೊ. ಪರಮಶಿವಯ್ಯ, ಹಿರಿಯ ಪ್ರಾಧ್ಯಾಪಕರು ಮತ್ತು ಡೀನರು ವಾಣಿಜ್ಯ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ಪ್ರೊ. ಜಯಶೀಲ, ಹಿರಿಯ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ಡಾ. ಬಿ.ಟಿ. ಸಂಪತ್ ಕುಮಾರ್ ಪ್ರಾಧ್ಯಾಪಕರು, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ ಇವರು ಭಾಗವಹಿಸಿದ್ದರು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮೂರ್ತಿ ಹೆಚ್. ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು, ಶ್ರೀ ರಂಗಸ್ವಾಮಿ ಮಾನ್ಯ ಜಂಟಿ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ತುಮಕೂರು, ಪ್ರೊ. ಬಿ. ಶೇಖರ್ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ವಾಣಿಜ್ಯ ಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ಶ್ರೀ ಹೆಚ್.ಸಿ. ಗೌಡ ಮಾನ್ಯ ಪ್ರಬಂಧಕರು, ಯೋಜನೆ & ಅಭಿವೃದ್ಧಿ ವಿಭಾಗ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ತುಮಕೂರು, ಶ್ರೀಮತಿ ಮೀನಾಕ್ಷಿ ಖಂಡಿಮಠ್, ನಿವೃತ್ತ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾನಿಲಯ, ಶ್ರೀ ಸುರೇಶ್ ರಾವ್ ಮಾನ್ಯ ಅಧ್ಯಕ್ಷರು, ಶಿವಾಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು ಭಾಗವಹಿಸಿದ್ದರು.

**ಪ್ರಧಾನ ವಿಷಯ ಮಂಡನೆ :** ಯುವಕರು ಮತ್ತು ಸಹಕಾರ ವಿಷಯದ ಕುರಿತಾಗಿ ಡಾ. ಎಂ.ಆರ್. ಶ್ರೀನಾಥ್ ಮಾನ್ಯ ವಿಶ್ರಾಂತ ನಿರ್ದೇಶಕರು, ರಾಷ್ಟ್ರೀಯ ಸಹಕಾರಿ ಯೂನಿಯನ್ ಹಾಗೂ ಸಂದರ್ಶಕ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ನಡೆಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್, ತರಬೇತಿ ವಿಭಾಗದ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ, ಸಲಹೆಗಾರರಾದ ಶ್ರೀ ವಿ.ಜೆ. ಕಾರಕೂನ್, ಕಿರಿಯ ಅಧಿಕಾರಿಯಾದ ಶ್ರೀಮತಿ ಸವಿತ ಎನ್.ಇ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಶಿಕುಮಾರ್ ಹಾಗೂ ಸಹಾಯಕರಾದ ಶ್ರೀ ವಿಶ್ವನಾಥ ಎಂ. ಸೇರಿದಂತೆ ಈ ಕಾರ್ಯಕ್ರಮದಲ್ಲಿ ಒಟ್ಟು 270 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ತರಬೇತಿ ಕಾರ್ಯಕ್ರಮ



**ಬೆಂಗಳೂರು** : ದಿನಾಂಕ 11.02.2025ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು/ಮಾರಾಟಾಧಿಕಾರಿಗಳಿಗಾಗಿ ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಉದಯ ಸೌಹಾರ್ದ ಸಹಕಾರಿ ಸಂಘ ನಿ, ಹನುಮಂತನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎನ್. ಚಂದ್ರಶೇಖರ್, ಮಾನ್ಯ ನಿರ್ದೇಶಕರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ಹಾಗೂ ಮಾನ್ಯ ಉಪಾಧ್ಯಕ್ಷರು, ಉದಯ ಸೌಹಾರ್ದ ಸಹಕಾರಿ ಸಂಘ ನಿ, ಹನುಮಂತನಗರ, ಬೆಂಗಳೂರು ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಪ್ರೇಮಾನಂದ ಬಿ.ಪಿ. ಮಾನ್ಯ ಸಹಾಯಕ ನಿಬಂಧಕರು, ವಸೂಲಾಧಿಕಾರಿಗಳು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ, ಬೆಂಗಳೂರು ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಗಗನ ಕೆ. ಮಾನ್ಯ ಉಪನಿಬಂಧಕರು, (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ, ಬೆಂಗಳೂರು ಇವರು ಭಾಗವಹಿಸಿದ್ದರು. ವೇದಿಕೆಯಲ್ಲಿ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್. ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಬೆಂಗಳೂರು ನಗರದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್ ಹಾಗೂ ಶ್ರೀ ಭವನ್‌ರಾವ್ ರವರು ಭಾಗವಹಿಸಿದ್ದರು. 91 ಸೌಹಾರ್ದ ಸಹಕಾರಿಗಳಿಂದ 110 ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

## ಪ್ರವೇಶ ತರಬೇತಿ ಕಾರ್ಯಕ್ರಮ



**ಬೆಳಗಾವಿ** : ದಿನಾಂಕ 01 ಫೆಬ್ರವರಿ 2025 ರಂದು ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ನಿಪ್ಪಾಣಿ, ರಾಯಭಾಗ, ಹುಕ್ಕೇರಿ ಹಾಗೂ ಕಾಗವಾಡ ತಾಲೂಕಿನಲ್ಲಿ 2023–24 ಹಾಗೂ 2024–25 ಸಾಲಿನಲ್ಲಿ ನೂತನವಾಗಿ ಸೌಹಾರ್ದ ಕಾಯ್ದೆಯಡಿ ನೊಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಪ್ರವೇಶಾತಿ ತರಬೇತಿಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಭಾ ಭವನ, ಬಸವ ಸರ್ಕಲ್, ಚಿಕ್ಕೋಡಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಇದರ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ಇವರು ಆಗಮಿಸಿದ್ದರು. ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಹಾಂತೇಶ ಹೊಸಪೇಟೆ ಇವರು ಸಹಕಾರಿಗಳ ಲೆಕ್ಕಪತ್ರ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಿವಕಾಂತ ಎನ್ ಇವರು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಮತ್ತು ಮುಖ್ಯ ಅಂಶಗಳು ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಇವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಮಾಹಿತಿ ನೀಡಿದರು. ನಿರೂಪಣೆ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ನೆರವೇ–ರಿಸಿದರು ಹಾಗೂ ಶ್ರೀ ಶಿವಕಾಂತ ಎನ್ ವಂದಿಸಿದರು. ಸಭೆಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 59 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

### ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ಮಾರ್ಚ್ ಮಾಹೆಯಲ್ಲಿ ರಾಯಚೂರು ಹಾಗೂ ದಕ್ಷಿಣ ಕನ್ನಡ ವಿಶ್ವವಿದ್ಯಾಲಯದಲ್ಲಿ ಯುವಜನ ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮ.
2. ಮಾರ್ಚ್ ಮಾಹೆಯಲ್ಲಿ ಸಂಯುಕ್ತ ಸಹಕಾರಿಯಲ್ಲಿ ನೂತನವಾಗಿ ನೇಮಕವಾಗಿರುವ ಸಿಬ್ಬಂದಿಗಳಿಗಾಗಿ 5 ದಿನಗಳ ಪ್ರವೇಶ ತರಬೇತಿ ಕಾರ್ಯಕ್ರಮ.
3. ದಿನಾಂಕ 12.03.2025 ರಂದು ಕೇಂದ್ರ ಕಛೇರಿ ಹಾಗೂ ಬೆಂಗಳೂರು ಪ್ರಾಂತದ ಸೌಹಾರ್ದ ಸಹಕಾರಿಗಳಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಕೇಂದ್ರ ಕಛೇರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.



**ಬೆಳಗಾವಿ :** ದಿನಾಂಕ 05 ಫೆಬ್ರವರಿ 2025 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ಯರಗಟ್ಟಿ, ರಾಮದುರ್ಗ, ಚನ್ನಮ್ಮನ ಕಿತ್ತೂರ, ಮೂಡಲಗಿ ಹಾಗೂ ಗೋಕಾಕ ತಾಲೂಕಿನಲ್ಲಿ 2023–24 ಹಾಗೂ 2024–25 ಸಾಲಿನಲ್ಲಿ ನೂತನವಾಗಿ ಸೌಹಾರ್ದ ಕಾಯ್ದೆಯಡಿ ನೊಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಪ್ರವೇಶಾತಿ ತರಬೇತಿಯನ್ನು ತರಬೇತಿ ಸಭಾಂಗಣ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು 441 ದಾವಾ ಪಂಚಾಯತ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀಮತಿ ರಂಜನಾ ಟಿ ಪೋಳ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಶೋಭಾ ಆರ್, ಸಹಪ್ರಧಾನ ವ್ಯವಸ್ಥಾಪಕರು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ ಇವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸಹಕಾರಿಗಳ ಲೆಕ್ಕಪತ್ರ ನಿರ್ವಹಣೆ ಕುರಿತು ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಜಮಖಂಡಿ ಇವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ವರ್ಚುವಲ್ ಅಕೌಂಟ ಮೂಲಕ ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಪಾವತಿಸುವ ಕುರಿತು ಹಾಗೂ ಸಹಕಾರಿಯ ಲಾಭಾಂಶ ಹಂಚಿಕೆ ಕುರಿತು ಶ್ರೀಮತಿ ಮಲ್ಲಮ್ಮ ದೇಗಾಂ, ಹಿರಿಯ ಸಹಾಯಕಿ, ಇವರು ಮಾಹಿತಿ ನೀಡಿದರು. ಮೂರನೇಯ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಮತ್ತು ಮುಖ್ಯ ಅಂಶಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ಮಾಹಿತಿ ನೀಡಿದರು. ಶ್ರೀಮತಿ ರೇಷ್ಮಾ ಪಾಟೀಲ ಇವರು ನಿರೂಪಿಸಿದರು. ಸ್ವಾಗತ ಮತ್ತು ವಂದನಾರ್ಪಣೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುಜಯ ಬೆಳವಿ ಇವರು ನಡೆಸಿಕೊಟ್ಟರು. ತರಬೇತಿಯಲ್ಲಿ 23 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.



**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮಂಡ್ಯ & ಚಾಮರಾಜನಗರ ಜಿಲ್ಲೆಗಳಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರುಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗೆ "ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ"ವನ್ನು ದಿನಾಂಕ:25.02.2025ರಂದು "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆ & ಅಧ್ಯಕ್ಷತೆಯನ್ನು ಶ್ರೀ ಗುರುರಾಜ್ ಬಿ ಟಿ. ಮಾನ್ಯ ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ವಹಿಸಿದ್ದರು. ಈ ಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರಾ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಇವರು ನುಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಮಾಡಿದರು.

ಈ ಕಾರ್ಯಾಗಾರದಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳು ಲಾಭಕ್ಕೆ ಬರಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಶ್ರೀ ರಮೇಶ್ ಕುಮಾರ್ ರವರು ಉಪನ್ಯಾಸವನ್ನು ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 15 ಸೌಹಾರ್ದ ಸಹಕಾರಿಗಳಿಂದ 19 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳಿಗೆ ಆಹ್ವಾನ

ಸಂಯುಕ್ತ ಸಹಕಾರಿಯ ವತಿಯಿಂದ ಪ್ರತಿ ತಿಂಗಳು ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆ ಪ್ರಕಟವಾಗುತ್ತಿದೆ. ಪ್ರಸ್ತುತ 6500 ಚಂದಾದಾರರಿರುತ್ತಾರೆ. ಈ ಪತ್ರಿಕೆಯಲ್ಲಿ ಸರ್ಕಾರದ ಆದೇಶಗಳು, ಕಾಯಿದೆ ತಿದ್ದುಪಡಿಗಳು, ರಾಜ್ಯದ ಹಾಗೂ ಕೇಂದ್ರ ಸಹಕಾರ ಕ್ಷೇತ್ರದ ಮಹತ್ವದ ಸುದ್ದಿಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ವರದಿಗಳ ಜೊತೆಗೆ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಉತ್ತಮ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ಈ ಪತ್ರಿಕೆಯಲ್ಲಿ ಸಹಕಾರ, ಹಣಕಾಸು ನಿರ್ವಹಣೆ, ಸಾಮಾಜಿಕ ಚಟುವಟಿಕೆಗಳು ಹಾಗೂ ಸಹಕಾರ ಕ್ಷೇತ್ರದ ವಿವಿಧ ಚಟುವಟಿಕೆಗಳ ವರದಿಗಳು, ಯಶಸ್ವಿ ಸೌಹಾರ್ದ ಸಹಕಾರಿಗಳ ಯಶೋಗಾಥೆಗಳು ಹಾಗೂ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಶೇಷ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ಪ್ರಕಟಣೆಗೆ ಆಯ್ಕೆಯಾದ ಲೇಖನಕ್ಕೆ ಸೂಕ್ತ ಸಂಭಾವನೆಯನ್ನು ನೀಡಲಾಗುತ್ತದೆ. ಲೇಖನವು ಎರಡರಿಂದ ಮೂರು ಪುಟಗಳಾಗಿರಬೇಕು. ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಇರಬೇಕು. ಸಹಕಾರಿಗಳು, ಸಹಕಾರಿ ತಜ್ಞರು, ಕಾಲೇಜು ಅಧ್ಯಾಪಕರು, ವಿದ್ಯಾರ್ಥಿಗಳು, ಸಹಕಾರಿಗಳ ಪದಾಧಿಕಾರಿಗಳು, ಸಹಕಾರ ಇಲಾಖಾ ಅಧಿಕಾರಿಗಳು ಹಾಗೂ ಸಹಕಾರಿ ಸಿಬ್ಬಂದಿಯವರು ಲೇಖನಗಳನ್ನು ಕಳುಹಿಸಬಹುದಾಗಿದೆ.

**ಲೇಖನಗಳ ಪ್ರಕಟಣೆ ಹಕ್ಕು : ಸಂಪಾದಕರಿಗೆ ಇರುತ್ತದೆ.**



**ಕೊಪ್ಪಳ** : ದಿನಾಂಕ 25.02.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಗಂಗಾ ಯಮುನಾ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿ ಸಭಾಂಗಣದಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ನೆರವೆರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಮಾನ್ಯ ಉಪನಿಬಂಧಕರಾದ ಶ್ರೀ ಸಜ್ಜನ ಪ್ರಕಾಶರವರು, ಕೊಪ್ಪಳ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಶಂಕರಗೌಡ ಹಿರೇಗೌಡ, ಕುಮಾರೆಪ್ಪ ಸಿಂಗನಾಳ, ಶರಣಪ್ಪ ವಡಗೇರಿ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರವರು ಉಪಸ್ಥಿತರಿದ್ದರು.

ಮೊದಲನೆಯ ಅವಧಿಯಲ್ಲಿ ಮಾನ್ಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ ರವೀಂದ್ರನಾಥರವರು ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹಾಗೂ ಹಾಗು swot analysis ಕುರಿತು ಉಪನ್ಯಾಸ ನೀಡಿದರು.

ಎರಡನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರರವರು ಸಹಕಾರಿಗಳು ಲಾಭದಲ್ಲಿ ಬರಲು ಅನುಸರಿಸಬೇಕಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನೆರವೇರಿಸಿದರು. ತರಬೇತಿ ಕಾರ್ಯಕ್ರಮದಲ್ಲಿ 113 ಪ್ರತಿನಿಧಿಗಳು ಭಾಗವಹಿಸಿದ್ದರು.



**ವಿಜಯಪುರ** : ದಿನಾಂಕ 25 ಫೆಬ್ರವರಿ 2025 ರಂದು ವಿಜಯಪುರ ಜಿಲ್ಲೆಯಲ್ಲಿ 2021–22, 2022–23, 2023–24 ಹಾಗೂ 2024–25 ಸಾಲಿನಲ್ಲಿ ನೂತನವಾಗಿ ಸೌಹಾರ್ದ ಕಾಯ್ದೆಯಡಿ ನೊಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಪ್ರವೇಶಾತಿ ತರಬೇತಿಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರ ಸಂಘ ನಿ., ಕೆ.ಸಿ. ನಗರ (ಬಂಜಾರ ಕ್ರಾಸ್) ಹತ್ತಿರ, ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ಹತ್ತಿರ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ ಇವರು ಉಪಸ್ಥಿತರಿದ್ದರು. ಸಹಕಾರಿಗಳ ಲೆಕ್ಕಪತ್ರ ನಿರ್ವಹಣೆ ಕುರಿತು ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಜಮಖಂಡಿ ಇವರು ಉಪನ್ಯಾಸ ನೀಡಿದರು. ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ಸಹಕಾರ ಕ್ಷೇತ್ರದ ಪರಿಚಯ, ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಮತ್ತು ಮುಖ್ಯಅಂಶಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ಪ್ರಾಸ್ತಾವಿಕ ನುಡಿಗಳನ್ನು ನುಡಿದರು ಹಾಗೂ ಶ್ರೀಮತಿ ಪ್ರತಿಭಾ ಮಠ ಇವರು ಕಾರ್ಯಕ್ರಮ ನಡೆಸಿಕೊಟ್ಟರು. ತರಬೇತಿಯಲ್ಲಿ 47 ಸೌಹಾರ್ದ ಸಹಕಾರಿಗಳಿಂದ 71 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.



**ಚಾಮರಾಜನಗರ** : ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘ ಇದರ ವತಿಯಿಂದ ತನ್ನ ಸದಸ್ಯರುಗಳಿಗೆ ಆರ್ಥಿಕ ಅನುಕೂಲ ವಾಗುವ ದೃಷ್ಟಿಯಿಂದ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಕೊಳ್ಳೇಗಾಲ ತಾಲೂಕಿನಲ್ಲಿ ಆಯೋಜಿಸಿದ್ದು ಈ ಕಾರ್ಯಕ್ರಮದಲ್ಲಿ ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಲರಾಮ ಎ ರವರು ಭಾಗವಹಿಸಿ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಮಾಹಿತಿಯನ್ನು ನೀಡಿದರು.

## ಶತಕೋಟಿ ಸಂಭ್ರಮಾಚರಣೆ ಹಾಗೂ ಪುಸ್ತಕ ಲೋಕಾರ್ಪಣೆ

### ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಸಾಮಾಜಿಕ ಕಾರ್ಯ ಶ್ಲಾಘನೀಯ - ಡಾ. ಶ್ರೀಪತಿ ಕಲ್ಲೂರಾಯ




**ಪುತ್ತೂರು** : ರಾಜ್ಯದ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ದರ್ಬೆ ಪುತ್ತೂರು ಇದರ ಪೂರಕ ಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ಇದರ ವತಿಯಿಂದ ದಿನಾಂಕ 19-02-2025 ರಂದು 7ನೇಯ ಕೃತಿ ವೃತ್ತಿ ಬದುಕು ಹೇಗಿರಬೇಕು? ಉದ್ಯೋಗಸ್ಥರಿಗೊಂದು ಮಾರ್ಗದರ್ಶಿ ಕೃತಿಯು ಲೋಕಾರ್ಪಣೆಗೊಂಡಿತು.

ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ವಿವೇಕಾನಂದ ಕಾಲೇಜು (ಸ್ವಾಯತ್ತ) ಆಡಳಿತ ಮಂಡಳಿ ಪುತ್ತೂರು ಇದರ ಅಧ್ಯಕ್ಷರಾದ ಡಾ. ಶ್ರೀಪತಿ ಕಲ್ಲೂರಾಯ ಇವರು ಸರಸ್ವತಿ ಸಹಕಾರಿಯ ಪ್ರಗತಿ ಮತ್ತು ಸೇವಾಕಾರ್ಯಗಳು ಶ್ಲಾಘನೀಯ, ಸಹಕಾರಿ ಕ್ಷೇತ್ರವು ವಿಶೇಷವಾಗಿ ದಕ್ಷಿಣ ಕನ್ನಡ ಭಾಗದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳುತ್ತಾ ಸಂಸ್ಥೆಗೆ ಶುಭ ಹಾರೈಸಿದರು.

ಲೋಕಾರ್ಪಣೆಗೊಂಡ ಕೃತಿಯ ಕುರಿತು ಮಾತನಾಡಿದ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಆಶಾ ಬೆಳ್ಳಾರೆ ಇವರು ಕೃತಿಯು ಅತ್ಯಂತ ಪರಿಣಾಮಕಾರಿಯಾಗಿ ಮೂಡಿ ಬಂದಿದ್ದು ಲೇಖಕರು ವೃತ್ತಿಬದುಕಿನ ಪ್ರತಿಯೊಂದು ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾ ಮಾರ್ಗದರ್ಶನವನ್ನು ನೀಡಿದ್ದಾರೆ ಎಂದು ಹೇಳಿದರು.

ಕೃತಿಯ ಲೇಖಕರಾದ ರಾಜ್ಯ-ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರಾದ ಶ್ರೀನಾರಾಯಣ ಭಟ್ ಟಿ ರಾಮಕುಂಜ ಇವರು ಮಾತನಾಡಿ ಲೇಖಕನಿಗೆ ಕೃತಿಯನ್ನು ಓದಿ ಓದುಗರು ಅದನ್ನು ಅನುಷ್ಠಾನಗೊಳಿಸಿಕೊಂಡರೆ ಸಾರ್ಥಕ್ಯವನ್ನು ನೀಡುತ್ತದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶ್ರೀ ಸರಸ್ವತಿ ಸಹಕಾರಿಯ ಪ್ರಥಮ ಶಾಖೆ ದರ್ಬೆಯು 100 ಕೋಟಿ ವ್ಯವಹಾರ ದಾಖಲಿಸಿದ ಪ್ರಯುಕ್ತ ಶತಕೋಟಿ ಸಂಭ್ರಮ ಕಾರ್ಯಕ್ರಮವೂ ನಡೆಯಿತು. ಈ ಪ್ರಯುಕ್ತ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ ವತಿಯಿಂದ ಪುತ್ತೂರಿನ ಬಿರುಮಲೆಯಲ್ಲಿರುವ ಪ್ರಜ್ಞಾ ಆಶ್ರಮವಾಸಿಗಳಿಗೆ ಉಪಹಾರದ ವ್ಯವಸ್ಥೆ ಹಾಗೂ ಪುತ್ತೂರಿನ ಮುಕ್ರಂ ಪಾಡಿಯಲ್ಲಿರುವ ಆನಂದಾಶ್ರಮ ವಾಸಿಗಳಿಗೆ ಒಂದು ದಿನದ ಪ್ರಾಯೋಜಕತ್ವವನ್ನು ನೀಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶ್ರೀ ಸರಸ್ವತಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ ಇವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸರಸ್ವತಿ ಸಹಕಾರಿಯು ನಡೆದು ಬಂದ ಹಾದಿಯನ್ನು ಸ್ಮರಿಸುತ್ತಾ ದರ್ಬೆ ಶಾಖೆಯು ಶತಕೋಟಿಯ ಮೈಲಿಗಲನ್ನು ದಾಟಲು ಕಾರಣೀಭೂತರಾದ ಸದಸ್ಯ ಬಾಂಧವರಿಗೆ ಹಿತೈಷಿಗಳಿಗೆ ಎಲ್ಲ-ರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು. ಅಂತೆಯೇ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಅನೇಕ ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದು, ಇದರ ಒಂದು ಭಾಗವಾಗಿ ಪುಸ್ತಕಗಳನ್ನು ಬಿಡುಗಡೆ ಮಾಡುತ್ತಿದ್ದು ಇದನ್ನು ಓದಿ ಅನುಷ್ಠಾನ ಗೊಳಿಸಿ ಎಲ್ಲರಲ್ಲೂ ಸುಪ್ತವಾಗಿರುವ ಶಕ್ತಿಯನ್ನು ಜಾಗೃತಗೊಳಿಸಿಕೊಂಡು ಅಸಾಮಾನ್ಯ ವ್ಯಕ್ತಿಗಳಾಗಿ ಬೆಳೆಯುವಂತಾಗಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿವಿಧ ಗಣ್ಯರು ಉಪಸ್ಥಿತರಿದ್ದರು.

ಶ್ರೀ ಸರಸ್ವತಿ ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತನಾಯಕ್ ಎ ಇವರು ಪ್ರಾಸ್ತಾವಿಕ ಮಾತುಗಳನ್ನಾಡಿ ಸರ್ವರನ್ನೂ ಸ್ವಾಗತಿಸುತ್ತಾ ದರ್ಬೆ ಶಾಖೆಯ ಈ ಸಾಧನೆಗೆ ಶ್ರಮಿಸಿದ ಸದಸ್ಯರು, ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರನ್ನು ಸ್ಮರಿಸಿದರು. ಸಹಕಾರಿಯ ಸಿಬ್ಬಂದಿ ಶ್ರೀಮತಿ ಸುಷ್ಮಾ ಪ್ರಾರ್ಥಿಸಿದರು, ದರ್ಬೆ ಶಾಖೆಯ ಹಿರಿಯ ವ್ಯವಸ್ಥಾಪಕರಾದ ಶ್ರೀ ದೇವಿಪ್ರಸಾದ್ ಎ ವಂದಿಸಿದರು. ಆಡಳಿತ ಕಚೇರಿಯ ಸಿಬ್ಬಂದಿ ಶ್ರೀ ಬಿಪಿನ್ಚಂದ್ರ ಕಾರ್ಯಕ್ರಮ ನಿರೂಪಿಸಿದರು.

---

## ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಎರಡು ದಿನಗಳ ತಂಬಿಟ್ಟಿನ ಮೇಳ

**ಕೋಲಾರ** : ದಿನಾಂಕ 24.02.2025ರಂದು ಸಮೃದ್ಧಿ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ, ಗೌರಿಬಿದನೂರು, ಸಹಕಾರಿಯ ವತಿಯಿಂದ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಎರಡು ದಿನಗಳ ಕಾಲ ತಂಬಿಟ್ಟಿನ ಮೇಳವನ್ನು ನಗರಸಭೆ ಆವರಣ, ಗೌರಿಬಿದನೂರು ಇಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರಾದ ಶ್ರೀ ಸಿ.ಆರ್. ನರಸಿಂಹ ಮೂರ್ತಿ ಹಾಗೂ ಮತ್ತಿತರ ಗಣ್ಯರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಮರ್ ಆರ್, ನಗರಸಭೆ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣಪ್ಪ, ಸದಸ್ಯರಾದ ಶ್ರೀ ಡಿ.ಜೆ. ಚಂದ್ರಮೋಹನ್, ಸಹಕಾ-ರಿಯ ಅಧ್ಯಕ್ಷರಾದ ಶ್ರೀಮತಿ ಗಂಗಲಕ್ಷ್ಮಮ್ಮರವರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 20ನೇ ಶಾಖೆ ಕಲ್ಲಡ್ಕದಲ್ಲಿ ಶುಭಾರಂಭ.




**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿ ರಾಜ್ಯವ್ಯಾಪಿ ಕಾರ್ಯಕ್ಷೇತ್ರವನ್ನು ಹೊಂದಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 20ನೇ ಶಾಖೆಯು ಬಂಟ್ವಾಳ ತಾಲೂಕಿನ ಗೋಳ್ತಮ ಜಲುಗ್ರಾಮದ ಕಲ್ಲಡ್ಕದ ಚೈತನ್ಯ ವ್ಯವಹಾರ ಸಂಕೀರ್ಣದ 1ನೇ ಮಹಡಿಯಲ್ಲಿ ದಿನಾಂಕ 07-02-2025 ರಂದು ಶುಭಾರಂಭಗೊಂಡಿತು.

ನೂತನ ಶಾಖೆಯನ್ನು ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷರಾದ ಡಾ. ಪ್ರಭಾಕರಭಟ್ ಕಲ್ಲಡ್ಕ ಇವರು ದೀಪ ಬೆಳಗಿಸಿ ಉದ್ಘಾಟಿಸಿ ಸಹಕಾರಿ ಕ್ಷೇತ್ರವು ರಾಜಕೀಯ ಕ್ಷೇತ್ರಕ್ಕಿಂತಲೂ ಜನರಿಗೆ ಬಹಳ ಹತ್ತಿರವಾದ ಕ್ಷೇತ್ರವಾಗಿದೆ, ಜನರಿಗೆ ಆರ್ಥಿಕ ಶಕ್ತಿಯನ್ನು ನೀಡುವ ರಂಗ ಯಾವುದಾದರೂ ಇದ್ದರೆ ಅದು ಸಹಕಾರಿ ರಂಗ, ಲಕ್ಷ್ಮೀಯ ಬೆನ್ನ ಹಿಂದೆ ಸರಸ್ವತಿ ನಿಂತರೆ ಸ್ವಚ್ಛವಾದ ವ್ಯವಹಾರ ನಡೆಯುತ್ತದೆ ಎಂದು ಹೇಳುತ್ತಾ ಸರಸ್ವತಿ ಸಹಕಾರಿಯು ಇನ್ನಷ್ಟು ಜನರಿಗೆ ಸಹಕಾರಿಯಾಗಿ ಮುಂದುವರಿಯಲಿ ಎಂದು ಶುಭಹಾರೈಸಿದರು.

ಮುಖ್ಯ ಅತಿಥಿಗಳಾಗಿ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀರಾಜೇಶ್ ನಾಯ್ಕ್ ಇವರು ಆಗಮಿಸಿ ಶುಭಹಾರೈಸಿದರು. ಮಾಜಿ ಶಾಸಕರಾದ ಶ್ರೀ ರುಕ್ಮಯಪೂಜಾರಿ, ಗೋಳ್ತಮಜಲು ಗ್ರಾಮಪಂಚಾಯ ಅಧ್ಯಕ್ಷರಾದ ಶ್ರೀಮತಿ ಪ್ರೇಮ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕಿಂ-ಯಾದ ಶ್ರೀಮತಿ ಭಾರತಿಜಿ. ಭಟ್, ಶ್ರೀ ವೆಂಕಟರಮಣಸ್ವಾಮಿ ಪದವಿಕಾಲೇಜು ಬಂಟ್ವಾಳ ಇದರ ನಿವೃತ್ತ ಪ್ರಾಂಶುಪಾಲರಾದ ಡಾ.ಪಾಂಡುರಂಗನಾಯಕ್, ಚೈತನ್ಯ ವ್ಯವಹಾರ ಸಂಕೀರ್ಣ ಇದರ ಮಾಲಕರಾದ ಶ್ರೀ ತಿರುಮಲೇಶ್ವರಭಟ್, ಸಂಯುಕ್ತ ಸಹಕಾರಿ ಇದರ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ. ಎಸ್ ಇವರು ಭಾಗವಹಿಸಿ ನೂತನ ಶಾಖೆಗೆ ಶುಭ ಹಾರೈಸಿದರು.

ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತನಾಯಕ್ ಹಾಗೂ ಆಡಳಿತ ಮಂಡಲಿಯ ಹಾಲಿ ಹಾಗೂ ಮಾಜಿ ಸದಸ್ಯರು ಸಿಬ್ಬಂದಿ ವರ್ಗದವರು ಸಹಕಾರಿ ಗ್ರಾಹಕರು ಉಪಸ್ಥಿತರಿದ್ದರು.

ನೂತನ ಕಲ್ಲಡ್ಕ ಶಾಖೆಯ ಶುಭಾರಂಭದ ಕಲ್ಲಡ್ಕ ಶಾಖೆಯ 1 ವರ್ಷದ ಠೇವಣಿಗೆ 8.75% ಹಾಗೂ ಹಿರಿಯ ನಾಗರಿಕರಿಗೆ, ವಿಶೇಷ ಚೇತನರಿಗೆ ವಿಧವೆಯರಿಗೆ ಮತ್ತು ಯೋಧರಿಗೆ ಮತ್ತು ನೋಂದಾಯಿತ ಸಂಘ ಸಂಸ್ಥೆಗಳಿಗೆ 9.15% ಬಡ್ಡಿದರವನ್ನು ಫೆಬ್ರವರಿ 15 ತಾರೀಕಿನವರೆಗೆ ನಿಗದಿಪಡಿಸಲಾಗಿದೆ. ಕಡಿಮೆ ಬಡ್ಡಿ ದರದಲ್ಲಿ ಚಿನ್ನಾಭರಣ ಸಾಲ, ವಾಹನಸಾಲ, ಅಟೋಸಾಲ, ಗೃಹಸಾಲ, ಭೂ ಅಡಮಾನ ಸಾಲ ಸೌಲಭ್ಯವನ್ನು ಸದಸ್ಯರಿಗೆ ನೀಡಲಾಗುತ್ತದೆ.

## ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ತರಬೇತಿ ಕಾರ್ಯಕ್ರಮ




**ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆ :** ದಿನಾಂಕ 24.02.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಗಳಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಜಿಲ್ಲಾ ಸಹಕಾರ ಯುನಿಯನ್ ಕಛೇರಿ ಸಭಾಂಗಣ ಹೊಸಪೇಟೆಯಲ್ಲಿ ಬೆಳಿಗ್ಗೆ 10.30 ಗಂಟೆಗೆ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ರವಿಕುಮಾರ ಟಿಎಸ್ ರವರು ನೆರವೆರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಕಾಸ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗು ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾರ ಶ್ರೀ ವಿಶ್ವನಾಥ ಹಿರೇಮಠ ರವರು ವಹಿಸಿದ್ದರು. ಪ್ರಾಸ್ತವಿಕ ನುಡಿಯನ್ನು ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನೆರವೇರಿಸಿದರು. ತರಬೇತಿಯ ನಿರ್ವಹಣೆ ಮತ್ತು ಸ್ವಾಗತವನ್ನು ರವಿಕುಮಾರ ರವರು ನೆರವೆಸಿದರು. ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ವಿ ರವಿಂದ್ರನಾಥ ಮಾನ್ಯ ಸನ್ನದ್ದು ಲೆಕ್ಕಪರಿಶೋಧಕರು ಮತ್ತು ಶ್ರೀ ವರುಣ ಭಟ್, ಮಾನ್ಯ ಸನ್ನದ್ದು ಲೆಕ್ಕಪರಿಶೋಧಕರು ಉಪಸ್ಥಿತರಿದ್ದರು. ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ 28 ಸಹಕಾರಿಗಳಿಂದ 33 ಪ್ರತಿನಿಧಿಗಳು ಭಾಗವಹಿಸಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



**ಹರಪನಹಳ್ಳಿ :** ಆದರ್ಶ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್‌ಗೆ ನೂತನ ಅಧ್ಯಕ್ಷರಾಗಿ ಜಿ. ನಂಜನಗೌಡ ಸಿಎ ಹಾಗೂ ಉಪಾಧ್ಯಕ್ಷರಾಗಿ ಎಸ್.ಎ ವೇಣುಗೋಪಾಲ್ ಅವಿರೋಧವಾಗಿ ಆಯ್ಕೆಯಾದರು. ನೂತನ ಅಧ್ಯಕ್ಷರಾದ ಜಿ. ನಂಜನಗೌಡ ಸಿಎ ಇವರು ಮಾತನಾಡಿ ನನ್ನ ಮೇಲೆ ವಿಶ್ವಾಸವಿಟ್ಟು ಆದರ್ಶ ಪಟ್ಟಣ ಸೌಹಾರ್ದ ಬ್ಯಾಂಕಿಗೆ ಮತ್ತೊಮ್ಮೆ ಅಧ್ಯಕ್ಷರಾಗಲು ಅವಕಾಶ ಮಾಡಿಕೊಟಿದ್ದೀರಿ. 27 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ದಾವಣಗೆರೆ, ಹಾವೇರಿ, ಗದಗ, ಬಳ್ಳಾರಿ, ವಿಜಯನಗರ ಈ ಐದು ಜಿಲ್ಲೆಗಳಲ್ಲಿ ಇನ್ನೂ ಹೆಚ್ಚಿನ ಶಾಖೆ ತೆರೆದು ಬ್ಯಾಂಕಿನ ಉನ್ನತ ಸ್ಥಾನಕ್ಕೆ ಕೊಂಡೊಯ್ಯಲು ನಿಮ್ಮೆಲ್ಲರ ಸಹಕಾರದೊಂದಿಗೆ ಶ್ರಮಿಸುವುದಾಗಿ ತಿಳಿಸಿದರು. ಈ ವೇಳೆ ನಿರ್ದೇಶಕರಾಗಿ ಶ್ರೀ ವೀರಭದ್ರಯ್ಯ ಶ್ರೀಮತಿ ಎಸ್.ಎಂ, ಸುಧಾ ಜೆ.ಎಂ, ಶ್ರೀ ಮಂಜುನಾಥ ಕೆ.ಎಂ, ಶ್ರೀ ಪ್ರಕಾಶ್ ಬಿ.ಕೆ, ಶ್ರೀ ಭ್ರಮರಾಂಬ ಕೆ.ಸಿ, ಶ್ರೀ ಅಜ್ಜಣ್ಣ ಎಂ.ಬಿ, ಶ್ರೀ ರವಿಕುಮಾರ್, ಶ್ರೀ ಎಚ್. ದೇವರಾಜ್, ಶ್ರೀಮತಿ ಮಂಜುಳಾ ಕೆ.ಎಸ್, ಶ್ರೀಮತಿ ರೇಖಾ, ಟಿ.ಎಚ್.ಎಂ. ಸಹನಾಗೊಂಗಡಿ ಐದು ವರ್ಷಗಳ ಅವಧಿಗೆ ಅವಿರೋಧ ಆಯ್ಕೆಯಾದರು. ಈ ಸಂದರ್ಭದಲ್ಲಿ ಚುನಾವಣೆ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ ಷಣ್ಮುಖಪ್ಪ ಅವರು 2025 ರಿಂದ 2030 ರ ಐದು ವರ್ಷಗಳ ಅವಧಿಗೆ ಅಧ್ಯಕ್ಷರ, ಉಪಾಧ್ಯಕ್ಷರನ್ನು ಹಾಗೂ ನಿರ್ದೇಶಕರನ್ನು ಅವಿರೋಧವಾಗಿ ಘೋಷಣೆ ಮಾಡಿದರು.

## ಉದ್ಘಾಟನೆ



**ತುಮಕೂರು :** ದಿನಾಂಕ 16.02.2025ರಂದು ಶ್ರೀ ಜೇನುಕಲ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತಿಪಟೂರು, ತುಮಕೂರು ಜಿಲ್ಲೆ. ಸಹಕಾರಿಯ ನೂತನ ಕಟ್ಟಡ ಶ್ರೀ ಜೇನುಕಲ್ ಭವನವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಮತ್ತು ಶ್ರೀ ಸಿ.ಪಿ. ವಿಜಯ್ ರವರು, ಶ್ರೀ ಜೇನುಕಲ್ ಸಹಕಾರಿಯ ಅಧ್ಯಕ್ಷರಾದ ಶ್ರೀ ಈಶ್ವರಯ್ಯ ರವರು ಮತ್ತು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 09.02.2025 ರ ರವಿವಾರದಂದು ಶ್ರೀ ಆದಿನಾಥ ಅಲ್ಪ ಸಂಖ್ಯಾತರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅನಗೋಳ ಸಹಕಾರಿಯ 25 ನೇಯ ವರ್ಷದ ರಜತ ಮಹೋತ್ಸವ ಕಾರ್ಯಕ್ರಮವು ಸಂತ ಮೀರಾ ಇಂಗ್ಲಿಷ್ ಮೀಡಿಯಂ ಸ್ಕೂಲ್ ಅನಗೋಳ, ಇಲ್ಲಿ ಜರುಗಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪ.ಪೂ. ಸ್ವಸ್ತಿ ಶ್ರೀ ಜಿನಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಜಿಗಳು ಸಂಸ್ಥಾನಮಠ ನಾಂದಣಿ ಹಾಗೂ ಪ.ಪೂ. ಸ್ವಸ್ತಿ ಶ್ರೀ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮೀಜಿಗಳು ಸಂಸ್ಥಾನಮಠ ಕೊಲ್ಲಾಪುರ ಇವರುಗಳು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅಭಯ ಪಾಟೀಲ ಶಾಸಕರು ಬೆಳಗಾವಿ ದಕ್ಷಿಣ, ಅತಿಥಿಗಳಾಗಿ ಶ್ರೀ ಸಂಜಯ ಪಾಟೀಲ ಮಾಜಿ ಶಾಸಕರು ಬೆಳಗಾವಿ ಗ್ರಾಮೀಣ, ಶ್ರೀ ಜಗದೀಶ ಕವಟಗಿಮಠ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು, ಡಾ. ಗೋಪಾಲ ಡಿ ಜಿನಗೌಡಾ ಶಿಕ್ಷಣ ಪ್ರೇಮಿ ಹಾಗೂ ಉದ್ಯಮಿಗಳು, ಶ್ರೀ ವಿನೋದ ದೊಡ್ಡಣ್ಣವರ ಕಾರ್ಯದರ್ಶಿಗಳು ಭರತೇಶ ಶಿಕ್ಷಣ ಸಂಸ್ಥೆ ಬೆಳಗಾವಿ, ಶ್ರೀ ರವಿರಾಜ ಪಾಟೀಲ ನ್ಯಾಯವಾದಿಗಳು ಉಚ್ಚ ನ್ಯಾಯಾಲಯ ಧಾರವಾಡ ಇವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುಜಯ ಬೆಳವಿರವರು ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರುಗಳು ಹಾಗೂ ಸಹಕಾರಿಯ ಸದಸ್ಯರುಗಳು ಭಾಗವಹಿಸಿದ್ದರು



**ಬೆಳಗಾವಿ :** ದಿನಾಂಕ 09.02.2025 ರಂದು ಕರ್ನಾಟಕ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಹಳ್ಳೂರ, ತಾ: ಮೂಡಲಗಿ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ರವರು ಭಾಗವಹಿಸಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ರಾಯ ಬೆನಚಿನಮರಡಿ ಹಾಗೂ ಆಡಳಿತ ಮಂಡಲಿಯವರಿಗೆ ಮತ್ತು ಸಿಬ್ಬಂದಿಗಳಿಗೆ ಶುಭಾಶಯ ಕೋರಿದರು. ಮುಖ್ಯ ಅತಿಥಿಗಳಾಗಿ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುಜಯ ಬೆಳವಿ ಮತ್ತು ಶ್ರೀ ಜವಾಹರ ಮುಗ್ಗನವರ ರವರು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ. 11.02.2025 ರಂದು ಶ್ರೀ ದುರದುಂಡೇಶ್ವರ ಸೌಹಾರ್ದ ಸಹಕಾರಿ ನಿ., ದುರದುಂಡಿ ತಾ: ಗೋಕಾಕ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಮ.ನಿ.ಪ್ರ.ಸ್ವ ಗುರುಬಸವಲಿಂಗ ಮಹಾಸ್ವಾಮಿಗಳು, ಶ್ರೀ ದುರದುಂಡೇಶ್ವರ ಸಿದ್ದಸಂಸ್ಥಾನಮಠ, ಅರಭಾವಿಮಠ, ಜಗದ್ಗುರು ಶ್ರೀ ಶ್ರೀ ಶ್ರೀ ಡಾ ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳು, ಶ್ರೀ ಚಿನ್ಮೂಲಾದ್ರಿ ಶಿಲಾಪೂರಿ ಮಹಾಸಂಸ್ಥಾನಮಠ, ಶ್ರೀ ಗುರುಚಕ್ರವರ್ತಿಕಾಲಜ್ಞಾನಿ ಶ್ರೀ ಶ್ರೀ ಶ್ರೀ ಶಿವಯ್ಯ ಮಹಾಸ್ವಾಮಿಗಳು ಶ್ರೀ ಕ್ಷೇತ್ರ ಬಬಲಾದಿಮಠ ಅರಭಾಂವಿ ಮತ್ತು ಶಿಂಧಿಕುರಬೇಟ, ಪ.ಪೂ ಶ್ರೀ ಶ್ರೀ ಶ್ರೀ ಅಭಿನವ ಧರೇಶ್ವರ ಮಹಾಸ್ವಾಮಿಗಳು ಶ್ರೀ ಜಕ್ಕಮ್ಮದೇವಿ ಹಾಗೂ ಶ್ರೀಧರಿದೇವರ ಪುಣ್ಯಾಶ್ರಮ, ಖಡಕಭಾವಿ ಇವರು ವಹಿಸಿದ್ದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಗಣಪತಿ ಅಂತರಗಟ್ಟಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಬಸವರಾಜ ಹೊಂಗಲ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುಜಯ ಬೆಳವಿ ಹಾಗೂ ಶ್ರೀ ರಾಚಯ್ಯ ಹಿರೇಮಠ, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಸದಸ್ಯರು ಭಾಗವಹಿಸಿದ್ದರು.



**ಉತ್ತರ ಕನ್ನಡ :** ದಿನಾಂಕ 11–02–2025 ರ ಮಂಗಳವಾರ ಸಿರ್ಸಿ ನಗರದಲ್ಲಿ ನೂತನವಾಗಿ ನೊಂದಣಿಗೊಂಡು ಕಾರ್ಯಾರಂಭ ಮಾಡಿದ ಅರ್ಬನ್ ಕ್ಯಾಪಿಟಲ್ ಕ್ರೆಡಿಟ್ ಸೌಹಾರ್ದ ಸಹಕಾರ ಉದ್ಘಾಟನೆಯನ್ನು ಮಾನ್ಯ ಶಾಸಕರಾದ ಶ್ರೀ ಭೀಮಣ್ಣ ನಾಯ್ಕ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ರವರು ಭಾಗವಹಿಸಿ ಸಹಕಾರಿಗೆ ಶುಭ ಕೋರಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸದಸ್ಯ ಸಹಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 18.02.2025 ರಂದು ಶ್ರೀ ಮಹಾತ್ಮ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಿಪ್ಪಾಣಿ ಸಹಕಾರಿಯ 35 ನೇಯ ವರ್ಷದ ವಾರ್ಷಿಕೋತ್ಸವ ಸಮಾರಂಭದ ಉದ್ಘಾಟನೆಯನ್ನು ಪ.ಪೂ ಶ್ರೀ ಮಹಾಂತ ಪ್ರಭು ಸ್ವಾಮೀಜಿ, ಶೆಗುಣಸಿರವರು ಮತ್ತು ಪ.ಪೂ ಶ್ರೀ ಪ್ರಾಣಲಿಂಗ ಸ್ವಾಮೀಜಿ, ನಿಪ್ಪಾಣಿ ಶ್ರೀಗಳು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ರವರು ಭಾಗವಹಿಸಿದ್ದರು. ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಕುರಬೇಟ, ಅಧ್ಯಕ್ಷರಾದ ಶ್ರೀ ಶ್ರೀಕಾಂತ ಪರಮಾನೆ, ಉಪಾಧ್ಯಕ್ಷರಾದ ಶ್ರೀ ಪ್ರತಾಪ ಪಟ್ಟಣಶೆಟ್ಟಿ, ಆಡಳಿತ ಮಂಡಲಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು, ಶಾಖಾ ವ್ಯವಸ್ಥಾಪಕರು, ಸಿಬ್ಬಂದಿ ವರ್ಗದವರು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.



**ಚಿಕ್ಕಮಗಳೂರು** : ದಿನಾಂಕ : 15.02.2025ರಂದು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಗಾಯಿತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ರಜತ ಮಹೋತ್ಸವ ಕಾರ್ಯಕ್ರಮವನ್ನು ಕೊಪ್ಪದ ಗಾಯಿತ್ರಿ ಮಂದಿರದಲ್ಲಿ ಹಾಗೂ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿ.ಎ ರವರು ಸಹಕಾರಿಯ ನೂತನ ಕಟ್ಟಡವನ್ನು ಉದ್ಘಾಟಿಸಿದರು. ಅನಂತರ ರಜತ ಮಹೋತ್ಸವದ ಉದ್ಘಾಟನೆ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿ.ಎ. ರವರು ಹಾಗೂ ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಎ.ಆರ್ ರವರು ಉದ್ಘಾಟಿಸಿದರು. ಅನಂತರ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನ ಕುಮಾರ್ ಎ.ಆರ್ ರವರು ರಜತ ರಶ್ಮಿ ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು.

ಸಹಕಾರಿಯು 25 ವರ್ಷ ಪೂರ್ಣಗೊಳಿಸಿದ ಸಂಭ್ರಮದ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸಂಯುಕ್ತ ಸಹಕಾರಿಯ ಪರವಾಗಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಯಡಗೆರೆ ಸುಬ್ರಮಣ್ಯ ರವರು, ಶ್ರೀಮತಿ ತೇಜಸ್ವಿನಿ ಅನಂತ್ ಕುಮಾರ್ ರವರು, ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ. ರವೀಂದ್ರನಾಥ್ ರವರು, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ವಿಶ್ವನಾಥ್ ರವರು ಹಾಗೂ ಗಾಯಿತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಅಧ್ಯಕ್ಷರು ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ 500ಕ್ಕೂ ಹೆಚ್ಚು ಸಹಕಾರಿಯ ಸದಸ್ಯರು ಭಾಗವಹಿಸಿದ್ದರು.



**ಕೊಡಗು** : ದಿನಾಂಕ: 18.02.2025ರಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ಇಗ್ಗುತ್ತಪ್ಪ ಕೊಡವ ಸೌಹಾರ್ದ ಸಹಕಾರಿ ಸಂಘ ನಿಯಮಿತ., ಪೊನ್ನಂಪೇಟೆ ಭೇಟಿ ನೀಡಲಾಯಿತು. ಸದರಿ ಸಹಕಾರಿಗಳ ಆರ್ಥಿಕ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು, ಸಹಕಾರಿಯ ಅಭಿವೃದ್ಧಿಯ ಕುರಿತು ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ, ಮುಖ್ಯಕಾರ್ಯನಿರ್ವಾಹಕರಿಗೆ ಮತ್ತು ಸಿಬ್ಬಂದಿಯವರಿಗೆ ಮಾರ್ಗದರ್ಶನ ಮಾಡಿದರು. ಮೈಸೂರು ಮತ್ತು ಕೊಡಗು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು.

## ಕ್ಲಸ್ಟರ್ ಮಟ್ಟದ ತರಬೇತಿ

**ಉಡುಪಿ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಮೈಸೂರು ಪ್ರಾಂತೀಯ ಕಛೇರಿಯ ವತಿಯಿಂದ ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಬೈಂದೂರು ತಾಲ್ಲೂಕುಗಳ ಕ್ಲಸ್ಟರ್ ಮಟ್ಟದ ತರಬೇತಿ ಸಭೆಯನ್ನು ದಿನಾಂಕ: 21.02.2025 ರಂದು ಆಯೋಜನೆ ಮಾಡಲಾಗಿತ್ತು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳ ಸಾಲ ನೀಡಿಕೆ, ಸಾಲ ವಸೂಲಾತಿ ಕ್ರಮಗಳು, ಸಂಯುಕ್ತ ಸಹಕಾರಿಯ ಸುತ್ತೋಲೆಗಳು ಮತ್ತು ಪ್ರಸ್ತುತ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆಯನ್ನು ನಡೆಸಲಾಯಿತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ವಹಿಸಿ ಸೌಹಾರ್ದ ಸಹಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಅದೇ ರೀತಿ ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ಮತ್ತು ನಿರ್ದೇಶಕರುಗಳಾದ ಸುಬ್ರಹ್ಮಣ್ಯ ಹಾಗೂ ನಾಗರಾಜು ಇವರುಗಳು ಉಪಸ್ಥಿತರಿದ್ದರು. ಸದರಿ ಕಾರ್ಯಾಗಾರವನ್ನು ಬೆಳಗಿನ ಅವದಿಯಲ್ಲಿ ಕುಂದಾಪುರ ತಾಲ್ಲೋಕಿನ ಸೌಹಾರ್ದ ಸಹಕಾರಿಗಳಿಗೆ ಹೋಟೆಲ್ ಶರೋನ್ ಮತ್ತು ಮಧ್ಯಾಹ್ನದ ಅವಧಿಯಲ್ಲಿ ಬೈಂದೂರು ತಾಲ್ಲೂಕಿನ ಕಾಮಾಕ್ಷಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ಇಲ್ಲಿ ಆಯೋಜನೆ ಮಾಡಲಾಗಿತ್ತು, ಸದರಿ ತಾಲ್ಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ಸಭೆಯಲ್ಲಿ ಸೌಹಾರ್ದ ಸಹಕಾರಿಯ ಚಳುವಳಿ ಕುರಿತು ಮತ್ತು ಸಹಕಾರಿಗಳ ಬೆಳವಣಿಗೆಗಳ ಕುರಿತು ಚರ್ಚೆಯನ್ನು ನಡೆಸಲಾಯಿತು. ಕುಂದಾಪುರ ತರಬೇತಿಯಲ್ಲಿ ಒಟ್ಟು 20 ಪ್ರತಿನಿಧಿಗಳು ಹಾಗೂ ಬೈಂದೂರು ತರಬೇತಿಯಲ್ಲಿ ಒಟ್ಟು 14 ಪ್ರತಿನಿಧಿಗಳು ಭಾಗವಹಿಸಿದ್ದರು.

**ತುಮಕೂರು :** ದಿನಾಂಕ 05.02.2025ರಂದು ಆಕಾಶ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ, ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಚರ್ಚಿಸಿ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಉಪಸ್ಥಿತರಿದ್ದರು.

**ತುಮಕೂರು :** ದಿನಾಂಕ 05.02.2025ರಂದು ಶ್ರೀ ವಾಲ್ಮೀಕಿ ಸೌಹಾರ್ದ ಸಹಕಾರಿ ನಿ, ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಚರ್ಚಿಸಿ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಉಪಸ್ಥಿತರಿದ್ದರು.

**ಕೊಡಗು :** ದಿನಾಂಕ: 18.02.2025ರಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ಶ್ರೀ ಪಾವನಿ ಸೌಹಾರ್ದ ಸಹಕಾರಿ ಸಂಘ ನಿ., ವಿರಾಜಪೇಟೆ ಸಹಕಾರಿಗಳಿಗೆ ಭೇಟಿ ನೀಡಲಾಯಿತು. ಸದರಿ ಸಹಕಾರಿಗಳ ಆರ್ಥಿಕ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು, ಸಹಕಾರಿಯ ಅಭಿವೃದ್ಧಿಯ ಕುರಿತು ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ, ಮುಖ್ಯಕಾರ್ಯನಿರ್ವಾಹಕರಿಗೆ ಮತ್ತು ಸಿಬ್ಬಂದಿಯವರಿಗೆ ಮಾರ್ಗದರ್ಶನ ಮಾಡಿದರು. ಮೈಸೂರು ಮತ್ತು ಕೊಡಗು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು.

**ಕೊಡಗು :** ದಿನಾಂಕ: 18.02.2025ರಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ಒಕ್ಕೂಟದ ಕಾರ್ಯಚಟುವಟಿಕೆಗಳು ಹಾಗೂ ಅಭಿವೃದ್ಧಿಯ ಬಗ್ಗೆ ಒಕ್ಕೂಟದ ಆಡಳಿತ ಮಂಡಲಿ ಸದಸ್ಯರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ಮಾಡಿದರು. ಮೈಸೂರು ಮತ್ತು ಕೊಡಗು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು.

**ಚಿಕ್ಕಮಗಳೂರು :** ದಿನಾಂಕ : 15.02.2025ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಮೈಸೂರು ಪ್ರಾಂತದ ಚಿಕ್ಕಮಗಳೂರು ಜಿಲ್ಲೆಯ ಬೀರೂರು ಪಟ್ಟಣ ಸೌಹಾರ್ದ ಸಹಕಾರಿ ಸಂಘ ನಿ., ಕಡೂರು ತಾಲ್ಲೂಕು, ಚಿಕ್ಕಮಗಳೂರು ಸಹಕಾರಿಗೆ ಭೇಟಿ ನೀಡಿ ಸಹಕಾರಿಗಳ ಕಾರ್ಯವೈಖರಿಯ ಕುರಿತು ಹಾಗೂ ಮೈಕ್ರೊ ಫೈನಾನ್ಸ್ ಬಗ್ಗೆ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.

**ಹಾಸನ :** ದಿನಾಂಕ : 15.02.2025ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಬಿ.ಜಿ.ಎಸ್. ಸೌಹಾರ್ದ ಸಹಕಾರಿ ಸಂಘ ನಿ., ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಸಹಕಾರಿಗೆ ಭೇಟಿ ನೀಡಿ ಸಹಕಾರಿಗಳ ಕಾರ್ಯವೈಖರಿಯ ಕುರಿತು ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.

## ಫೆಬ್ರವರಿ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿ ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 04 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ಫೆಬ್ರವರಿ ತಿಂಗಳಲ್ಲಿ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**2. ಸಮಾಪನಾಧಿಕಾರಿ ನೇಮಕವಾಗಿರುವ ಸೌಹಾರ್ದ ಸಹಕಾರಿಗಳ ವಿವರ;**

ಅ. ಜೀವನ್ ತರಂಗಿಣಿ ಮಹಿಳಾ ಸ್ವ–ಸಹಾಯ ಸೌಹಾರ್ದ ಸಹಕಾರಿ ನಿ., ಲಿಂಗಸೂಗೂರು.

ಆ. ನಿಸರ್ಗ ಮಹಿಳಾ ಸ್ವ–ಸಹಾಯ ಸೌಹಾರ್ದ ಸಹಕಾರಿ ನಿ., ಮಸ್ಕಿ.

ಇ. ಬೀರಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಲಿಂಗಸೂಗೂರು

ಈ. ಶ್ರೀ ಕಸಬಾ ಲಿಂಗಸ್ಗೂರು ಮಹಿಳಾ ಸ್ವ–ಸಹಾಯ ಸೌಹಾರ್ದ ಸಹಕಾರಿ ನಿ., ಕಸಬಾಲಿಂಗಸೂಗೂರು.

ಮೇಲ್ಕಂಡ ಸೌಹಾರ್ದ ಸಹಕಾರಿಗಳಿಗೆ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು ಸಿಂಧನೂರು ಇವರು ದಿನಾಂಕ 28.01.2025ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿ, ರಾಯಚೂರು ಜಿಲ್ಲೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರನ್ನು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**3. ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಪೇಟೆ**

ಮೇಲ್ಕಂಡ ಸೌಹಾರ್ದ ಸಹಕಾರಿಗೆ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಕಲಬುರಗಿ ಪ್ರಾಂತ, ಕಲಬುರಗಿ ಇವರು ದಿನಾಂಕ 13.02.2025ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರನ್ನು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

# ಬ್ಯಾಂಕಿನಲ್ಲಿ ನಾಮಿನಿ ಎಂದರೇನು? ಮತ್ತು ಅದರ ಪ್ರಯೋಜನಗಳು

**ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ., ಜಮಖಂಡಿ. ಸಹಕಾರಿಯಿಂದ ಬಂದಿರುವ ಈ ಕೆಳಕಂಡ ಪ್ರಶ್ನೆಗಳಿಗೆ ಸಂಯುಕ್ತ ಸಹಕಾರಿಯ ಕಾನೂನು ವಿಭಾಗದ ಹಿರಿಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ಇವರು ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರ (ನಿವೃತ್ತ) ಇವರಿಂದ ಸಲಹೆ ಪಡೆದು ಈ ಲೇಖನವನ್ನು ಸಿದ್ದಪಡಿಸಿದ್ದಾರೆ. ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.**

1. **ಸದರಿ ಖಾತೆಗಳಲ್ಲಿಯ ಮೊತ್ತವನ್ನು ನಾಮ ನಿರ್ದೇಶಿತರಿಗೆ ಕೊಡಬಹುದೆ.**
2. **ನ್ಯಾಯಾಲಯದದಿಂದ ಆದೇಶವನ್ನು ತರಲು (ಸಕ್ಸೆಷನ್ ಪ್ರಮಾಣ ಪತ್ರ) ತಿಳಿಸಬೇಕೆ.**
3. **ಠೇವಣಿದಾರರು ಹಾಗೂ ನಾಮ ನಿರ್ದೇಶಿತರು ಮರಣ ಹೊಂದಿದಾಗ ಯಾವ ಕ್ರಮ ಕೈಕೊಳ್ಳಬೇಕು.**
4. **ಕೊಡುವ ಮೊತ್ತದ ಮೇಲೆ, ನಿಯಮಾವಳಿಗಳು ಇದ್ದರೆ ತಿಳಿಸಿರಿ.**
5. **ನಾಮ ನಿರ್ದೇಶನ ಕಾಯ್ದೆಯನ್ವಯ ನಾವು ಪಾಲಿಸಬೇಕಾದ ನಿಯಮಗಳು ಯಾವುವು.**

ಇಂದಿನ ಡಿಜಿಟಲ್ ಯುಗದ ನಿರಂತರ ಬದಲಾವಣೆಗಳು ಆರ್ಥಿಕ ಕ್ಷೇತ್ರದ ಮೇಲೂ ತನ್ನ ಛಾಪನ್ನು ಮೂಡಿಸಿದೆ, ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಬ್ಯಾಂಕಿಂಗ್ ಖಾತೆಗಳನ್ನು ತೆರೆಯುವ ಅವಶ್ಯಕತೆ ಮತ್ತು ಅನಿವಾರ್ಯತೆಗನುಗುಣವಾಗಿ ಹೊಂದುತ್ತಿದ್ದಾರೆ. ಕಾಲಮಾನಕ್ಕೆ ತಕ್ಕಂತೆ ಮನುಷ್ಯನ ಅಸ್ಥಿತ್ವದಲ್ಲಿಯೂ ಬದಲಾವಣೆಗಳು ಹೆಚ್ಚಾಗಿದ್ದು ಬದುಕಿನ ಅಸ್ಥಿರತೆ ಹೆಚ್ಚಾಗಿದೆ, ಹಾಗೆಯೇ ತನ್ನ ನಂತರ ತನ್ನ ಆತ್ಮೀಯರಿಗೆ ಹಾಗೂ ಕುಟುಂಬಕ್ಕೆ ಆರ್ಥಿಕ ಭದ್ರತೆಯನ್ನು ನೀಡಲು ಹೆಚ್ಚಿನ ಜನರು ಅಪೇಕ್ಷಿಸುತ್ತಿದ್ದಾರೆ. ಬ್ಯಾಂಕಿನ ಉಳಿತಾಯ ಖಾತೆಯನ್ನೊಳಗೊಂಡಂತೆ ವಿವಿಧ ರೀತಿಯ ಠೇವಣಿ ಖಾತೆಗಳಿಗೆ ನಾಮಿನಿಗಳ ನೇಮಕಾತಿಯು ಕೂಡ ಈ ರೀತಿಯ ಭದ್ರತೆಗಳಲ್ಲಿ ಒಂದು ಎನ್ನಬಹುದು.

ನಾಮಿನಿಯು ಠೇವಣಿದಾರರ ಮರಣಾನಂತರ ಠೇವಣಿಯ ಪಾಲಕನಾಗಿ ಕಾರ್ಯನಿರ್ವಹಿಸುತ್ತಾರೆ. ತಿದ್ದುಪಡಿಗೊಂಡ ಬ್ಯಾಂಕಿಂಗ್ ಕಾನೂನುಗಳನ್ವಯ ವ್ಯಕ್ತಿ, ಏಕ ಅಥವಾ ಜಂಟಿ ಖಾತೆದಾರರು ನಾಲ್ಕಕ್ಕೆ ಹೆಚ್ಚಿಲ್ಲದಂತೆ ಒಂದು ಅಥವಾ ಹೆಚ್ಚು ವ್ಯಕ್ತಿಗಳನ್ನು ಸತತವಾಗಿ ಅಥವಾ ಏಕಕಾಲದಲ್ಲಿ ನಾಮನಿರ್ದೇಶನ ಮಾಡಬಹುದು.

ಹೂಡಿಕೆಯ ಸಮಯದಲ್ಲಿ ನಾಮಿನಿಯನ್ನು ನೇಮಿಸದಿದ್ದರೆ, ನಂತರದ ದಿನಾಂಕದಂದು ಠೇವಣಿದಾರರು ನಾಮಿನಿಯನ್ನು ನೇಮಿಸಬಹುದು. ಸಂಬಂಧಿತ ಅರ್ಜಿ ನಮೂನೆಗಳನ್ನು ಬ್ಯಾಂಕಿಗೆ ಸಲ್ಲಿಸಬೇಕು.

ಉಳಿತಾಯ ಖಾತೆಗಳು ಹೆಚ್ಚು ವ್ಯಾಪಕವಾಗಿ ಬಳಸಲಾಗುವ ಬ್ಯಾಂಕ್ ಖಾತೆಗಳಲ್ಲಿ ಒಂದಾಗಿದೆ. ನಿಮ್ಮ ಆದ್ಯತೆಗಳನ್ನು ಅವಲಂಬಿಸಿ, ನೀವು ಉಳಿತಾಯ ಖಾತೆಯ ಹಣವನ್ನು ಠೇವಣಿ ಮಾಡಬಹುದು ಮತ್ತು ಠೇವಣಿ ಮಾಡಿದ ಮೊತ್ತದ ಮೇಲೆ ನೀವು ಅರ್ಧ ವಾರ್ಷಿಕ ಅಥವಾ ತ್ರೈಮಾಸಿಕವಾಗಿ ಬಡ್ಡಿಯನ್ನು ಪಡೆಯುತ್ತೀರಿ. ಭಾರತದಲ್ಲಿ ಉಳಿತಾಯ ಖಾತೆ ತೆರೆಯಲು ಯಾವುದೇ ಕಟ್ಟುನಿಟ್ಟಿನ ಕಾರ್ಯವಿಧಾನಗಳು ಅಥವಾ ಹೆಚ್ಚಿನ ದಾಖಲೆಗಳ ಅಗತ್ಯವಿಲ್ಲ. ಆದಾಗ್ಯೂ ಆರ್.ಬಿ.ಐ ನಿಯಮಾನುಸಾರ ಬ್ಯಾಂಕ್ ಗಳು ಕೆ.ವೈ.ಸಿ ನಿಯಮಗಳನ್ನು ಪಾಲಿಸಬೇಕಾಗುತ್ತದೆ.

ಬ್ಯಾಂಕ್ ಖಾತೆಯನ್ನು ತೆರೆಯುವಾಗ ಖಾತೆಗೆ ನಾಮಿನಿಯನ್ನು ನೇಮಿಸುವಂತಹ ಕೆಲವು ವಿಷಯಗಳನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕು. ಹಾಗಾದರೆ, ನಾಮಿನಿ ಯಾರು? ಮತ್ತು ನಾಮಿನಿಯನ್ನು ಹೊಂದುವುದರಿಂದ ಏನು ಪ್ರಯೋಜನ ಎಂಬುದನ್ನು ಅರ್ಥಮಾಡಿಕೊಳ್ಳೋಣ.

ಖಾತೆದಾರರ ಮರಣದಂತಹ ದುರದೃಷ್ಟಕರ ಪರಿಸ್ಥಿತಿಯಲ್ಲಿ ಠೇವಣಿ ಮಾಡಿದ ಹಣವನ್ನು ಸ್ವೀಕರಿಸಲು ಖಾತೆದಾರರಿಂದ ಆಯ್ಕೆ ಮಾಡಲ್ಪಟ್ಟ ವ್ಯಕ್ತಿಯೇ ನಾಮಿನಿ. ಇದರ ಪ್ರಯೋಜನವೇನು? ನೀವು ಮುಂಚಿತವಾಗಿ ನಾಮಿನಿಯನ್ನು ಹೆಸರಿಸಿದರೆ, ಹಣವನ್ನು ಸ್ವೀಕರಿಸಲು ಅಧಿಕಾರ ಹೊಂದಿರುವವರು ನಾಮಿನಿ ಎಂದು ಬ್ಯಾಂಕ್‌ಗೆ ತಿಳಿಯುತ್ತದೆ.

### ಯಾರು ನಾಮಿನಿಯಾಗಬಹುದು?

### ನಾಮನಿರ್ದೇಶಿತರಿಗೆ ಅರ್ಹತಾ ಮಾನದಂಡಗಳು ಇಲ್ಲಿವೆ:

- ಬ್ಯಾಂಕ್ ಖಾತೆಗೆ ನಾಮಿನಿ ಎಂದರೆ ಖಾತೆದಾರರು ನಂಬುವ ವ್ಯಕ್ತಿ. ಅವನು/ಅವಳು ಕುಟುಂಬದ ಸದಸ್ಯ, ಮಗು, ಸಂಗಾತಿ ಅಥವಾ ಸಂಬಂಧಿಕರಾಗಿರಬಹುದು.
- ನಾಮನಿರ್ದೇಶಿತರು ಕಾನೂನುಬದ್ಧ ಉತ್ತರಾಧಿಕಾರಿಯಲ್ಲದಿದ್ದರೆ, ಅವರು ಹಣವನ್ನು ಇಟ್ಟುಕೊಳ್ಳಲು ಅರ್ಹರಾಗಿರುವುದಿಲ್ಲ. ಕಾನೂನುಬದ್ಧ ಉತ್ತರಾಧಿಕಾರಿ ಎಂದರೆ ಹಣವನ್ನು ಆನುವಂಶಿಕವಾಗಿ ಪಡೆಯಲು ಕಾನೂನುಬದ್ಧವಾಗಿ ಅರ್ಹರಾಗಿರುವ ವ್ಯಕ್ತಿ.
- ನಾಮಿನಿಯು ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಾರೆ, ಅಂದರೆ ಅವನು/ಅವಳು ಹಣವನ್ನು ಕಾನೂನುಬದ್ಧ ಉತ್ತರಾಧಿಕಾರಿಗೆ ವರ್ಗಾಯಿಸಬೇಕು.
- ಒಬ್ಬ ಖಾತೆದಾರನು ತನ್ನ ಬಹು ಬ್ಯಾಂಕ್ ಖಾತೆಗಳಿಗೆ ವಿಭಿನ್ನ ನಾಮಿನಿಗಳನ್ನು ನೇಮಿಸಬಹುದು.
- ಒಬ್ಬ ಅಪ್ರಾಪ್ತ ವಯಸ್ಕನು ನಾಮಿನಿಯಾಗಬಹುದು ಆದರೆ ಅಪ್ರಾಪ್ತ

ವಯಸ್ಕನ ಪರವಾಗಿ ಹಣವನ್ನು ಸ್ವೀಕರಿಸಲು ಒಬ್ಬ ಪೋಷಕರನ್ನು ನೇಮಿಸಬೇಕು.

**ನಾಮಿನಿಯನ್ನು ಹೊಂದುವ ಪ್ರಯೋಜನಗಳು:**

**ನಾಮನಿರ್ದೇಶನದ ವಿವಿಧ ಪ್ರಯೋಜನಗಳನ್ನು ಕೆಳಗೆ ನೀಡಲಾಗಿದೆ:**

- ನಿಧಿ ವರ್ಗಾವಣೆ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ. ನಾಮಿನಿಯನ್ನು ಹೊಂದಿರುವುದು ನಿಮ್ಮ ಹಣ ನಿರ್ವಹಣೆಯನ್ನು ಸರಳಗೊಳಿಸುತ್ತದೆ. ಖಾತೆದಾರರ ಮರಣದ ಸಂದರ್ಭದಲ್ಲಿ, ನಾಮಿನಿಯು ಹಣವನ್ನು ಸುಲಭವಾಗಿ ಪಡೆಯಬಹುದು.
- ಕಾನೂನು ತೊಡಕುಗಳನ್ನು ಕಡಿಮೆ ಮಾಡುತ್ತದೆ. ಕುಟುಂಬವು ನಾಮಿನಿಯನ್ನು ಹೊಂದುವ ಮೂಲಕ ಕಾನೂನು ಸಮಸ್ಯೆಗಳನ್ನು ತಪ್ಪಿಸಬಹುದು. ನಾಮಿನಿ ಇಲ್ಲದಿದ್ದರೆ, ಹಣವನ್ನು ಪಡೆಯಲು ನ್ಯಾಯಾಲಯದ ಆದೇಶಗಳು ಮತ್ತು ಹೆಚ್ಚಿನ ದಾಖಲೆಗಳು ಬೇಕಾಗಬಹುದು, ಇದು ಸಮಯ ತೆಗೆದುಕೊಳ್ಳುತ್ತದೆ. ನಾಮಿನಿಯನ್ನು ಹೊಂದಿರುವುದು ಈ ತೊಂದರೆಗಳನ್ನು ತಡೆಯುತ್ತದೆ.
- ನಿಧಿಗಳಿಗೆ ತ್ವರಿತ ಪ್ರವೇಶವನ್ನು ಸಾಧ್ಯವಾಗಿಸುತ್ತದೆ. ತುರ್ತು ಪರಿಸ್ಥಿತಿಯಲ್ಲಿ ನಾಮಿನಿ ಇದ್ದರೆ ನಗದು ಬೇಗನೆ ತಲುಪುತ್ತದೆ. ಅಂತ್ಯಕ್ರಿಯೆಯ ವೆಚ್ಚಗಳು ಅಥವಾ ಆಸ್ಪತ್ರೆ ಶುಲ್ಕವನ್ನು ತ್ವರಿತವಾಗಿ ಪಾವತಿಸಲು ಇದು ಅತ್ಯಗತ್ಯವಾಗಿರುತ್ತದೆ. ಕಷ್ಟಕರ ಸಂದರ್ಭಗಳಲ್ಲಿ, ಗಣನೀಯ ಪ್ರಮಾಣದ ಹಣವನ್ನು ತ್ವರಿತವಾಗಿ ಪಡೆಯುವುದು ಸಹಾಯಕವಾಗಬಹುದು.

**ಭಾರತದಲ್ಲಿ ನಾಮಿನಿ ನಿಯಮಗಳು**

ಭಾರತದಲ್ಲಿ ನಾಮಿನಿ ನಿಯಮಗಳ ಬಗ್ಗೆ ತಿಳಿದುಕೊಳ್ಳುವುದು ಎಲ್ಲಾ ಖಾತೆದಾರರಿಗೆ ತುಂಬಾ ಸಹಾಯಕವಾಗಿದೆ. ಪ್ರಮುಖ ನಿಯಮಗಳು ಇಲ್ಲಿವೆ:

- ಠೇವಣಿ ಸಮಯದಲ್ಲಿ ನಾಮಿನಿ ರಿಜಿಸ್ಟರ್ ಮಾಡಿದ್ದರೆ ಮತ್ತು ನಾಮಿನಿಯು ಪ್ರಾಪ್ತ ವಯಸ್ಕರಾಗಿದ್ದರೆ ಅವರಿಗೆ ನಾಮಿನಿ ಹಣವನ್ನು ನೀಡಬಹುದು.
- ಠೇವಣಿಗೆ ಸಂಬಂಧಿಸಿದಂತೆ, ನ್ಯಾಯಾಲಯಗಳಲ್ಲಿ ಯಾವುದೇ ವ್ಯಾಜ್ಯಗಳಿಲ್ಲದಿದ್ದಲ್ಲಿ, ಪ್ರಮಾಣ ಪತ್ರದ ಅವಶ್ಯಕತೆ ಇರುವುದಿಲ್ಲ.
- ಠೇವಣಿದಾರರು ಹಾಗೂ ನಾಮಿನಿ ಇಬ್ಬರೂ ಮರಣ ಹೊಂದಿದಲ್ಲಿ, ಠೇವಣಿದಾರರ ವಂಶವೃಕ್ಷ ಪ್ರತಿ ಪಡೆದು ಅದರಂತೆ ಪಾತಿಸಬೇಕು. ಮತ್ತು ಕಾನೂನು ವಾರಸುದರನಾಗಿ ನ್ಯಾಯಾಯದ ಆದೇಶ ಪಡದಿರಬೇಕು.
- ಠೇವಣಿಗೆ ಏಕೈಕ ನಾಮಿನಿ ಇದ್ದು, ಮತ್ತು ಅವರು ಪ್ರಾಪ್ತ ವಯಸ್ಕರಾಗಿದ್ದಲ್ಲಿ ಠೇವಣಿಯ ಸಂಪೂರ್ಣ ಹಣವನ್ನು ನಾಮಿನಿಯು ತನ್ನ ಕೆವೈಸಿ ಮತ್ತು ಠೇವಣಿದಾರರ ಅಟೆಸ್ಟೆಡ್ ಮರಣ ಪ್ರಮಾಣ ಪತ್ರವನ್ನು ಬ್ಯಾಂಕಿಗೆ ಸಲ್ಲಿಸಿ ಪಡೆಯಬಹುದು.
- ಒಬ್ಬ ವ್ಯಕ್ತಿಯ ಬ್ಯಾಂಕ್ ಖಾತೆಗೆ ಸಾಮಾನ್ಯವಾಗಿ ಒಬ್ಬ ನಾಮಿನಿ ಅಗತ್ಯವಿರುತ್ತದೆ.
- ಒಬ್ಬರಿಗಿಂತ ಹೆಚ್ಚು ನಾಮಿನಿಯನ್ನು ಒಂದೇ ಠೇವಣಿಗೆ ಶೇಕಡಾವಾರು ಅಧಿಕಾರದಲ್ಲಿ ನಿಡಬಹುದು(ಉದಾ;50:50, 60:40).
- ನಾಮಿನಿ ಸ್ವೀಕರಿಸುವ ಹಣವು ಉತ್ತರಾಧಿಕಾರ ಕಾನೂನಿಗೆ ಒಳಪಟ್ಟಿರುತ್ತದೆ.
- ಮೃತ ಉತ್ತರಾಧಿಕಾರಿಗಳು ಕಾನೂನಿನ ಪ್ರಕಾರ ಠೇವಣಿ ಮೊತ್ತದ ಹಕ್ಕನ್ನು ಹೊಂದಿರುತ್ತಾರೆ.
- ನಾಮಿನಿ ಅಪ್ರಾಪ್ತರಾಗಿದ್ದರೆ, ಅಪ್ರಾಪ್ತ ವಯಸ್ಕರ ಪರವಾಗಿ ಸ್ವೀಕರಿಸಲು ಒಬ್ಬ ಪೋಷಕರನ್ನು ನೇಮಿಸಬೇಕು.
- ನೀವು ಭಾರತದಲ್ಲಿ ವಾಸಿಸುತ್ತಿದ್ದರೆ, ನೀವು ಒಬ್ಬ ಓಖಖ ಯನ್ನು ನಿಮ್ಮ ನಾಮಿನಿಯಾಗಿ ನೇಮಿಸಬಹುದು. ಆದಾಗ್ಯೂ, ಹಣವನ್ನು ವಿದೇಶಕ್ಕೆ ವರ್ಗಾಯಿಸುವ ಮೊದಲು ಖಃಖ ಅನುಮತಿ ಪಡೆಯಬೇಕು.
- ಅಪ್ರಾಪ್ತ ವಯಸ್ಕನ ಹೆಸರಿನಲ್ಲಿ ಖಾತೆಯನ್ನು ನಿರ್ವಹಿಸಲು ಕಾನೂನುಬದ್ಧವಾಗಿ ಅನುಮತಿಸಲಾದ ವ್ಯಕ್ತಿಯು ಅಪ್ರಾಪ್ತ ವಯಸ್ಕನನ್ನು ಪ್ರತಿನಿಧಿಸಲು ಯಾರನ್ನಾದರೂ ನೇಮಿಸಬಹುದು.

ಸ್ಥಿರ ಠೇವಣಿ ನಾಮಿನಿಗಳ ಕುರಿತು ಸಾಮಾನ್ಯ ಪ್ರಶ್ನೆಗಳು ಮತ್ತು ಉತ್ತರಗಳು

**1. ಸ್ಥಿರ ಠೇವಣಿಗೆಯಾರು ನಾಮಿನಿಯಾಗಬಹುದು?**

ನಿಮ್ಮ ನಿಶ್ಚಿತ ಠೇವಣಿಗೆ, ನಿಮ್ಮ ನಾಮಿನಿಯಾಗಲು ನಿಮ್ಮ ಹತ್ತಿರದ ಕುಟುಂಬದ ಸದಸ್ಯರಲ್ಲಿ ಯಾರನ್ನಾದರೂ ನಾಮನಿರ್ದೇಶನ ಮಾಡಬಹುದು. ಅದು ಪೋಷಕರು, ಸಹೋದರರು, ಸಂಗಾತಿ ಅಥವಾ ಮಗು ಆಗಿರಬಹುದು.

**2. ಸ್ಥಿರ ಠೇವಣಿ ಖಾತೆಗೆ ನಾಮಿನಿ ಇರುವುದು ಕಡ್ಡಾಯವೇ?**

ಇಲ್ಲ, ಸ್ಥಿರ ಠೇವಣಿಖಾತೆಗೆ ನಾಮಿನಿ ಇರುವುದು ಕಡ್ಡಾಯವಲ್ಲ ಆದರೆ ಯಾವುದೇ ಕಾನೂನು ತೊಂದರೆಗಳನ್ನು ತಪ್ಪಿಸಲು ಹಾಗೂ ಸ್ಥಿರ ಠೇವಣಿ ಖಾತೆದಾರರ ಅಕಾಲಿಕ ಮರಣದ ಸಂದರ್ಭದಲ್ಲಿ, ಪ್ರೀತಿ ಪಾತ್ರರು, ಸ್ಥಿರ ಠೇವಣಿ ಮೊತ್ತವನ್ನು ಪಡೆಯುವುದನ್ನು ಖಚಿತ ಪಡಿಸಿಕೊಳ್ಳಲು ಇದು ಸೂಕ್ತವಾಗಿದೆ.

**3. ಅಪ್ರಾಪ್ತ ವಯಸ್ಕರನ್ನು ಸ್ಥಿರ ಠೇವಣಿ ಖಾತೆಯ ನಾಮಿನಿಯನ್ನಾಗಿ ಮಾಡಬಹುದೇ?**

ಹೌದು, ನಿಶ್ಚಿತ ಠೇವಣಿ ಖಾತೆದಾರರು 18 ವರ್ಷಕ್ಕಿಂತ ಕೆಳಗಿನ ವಯಸ್ಸಿನ ವ್ಯಕ್ತಿಯನ್ನು ಸ್ಥಿರ ಠೇವಣಿಖಾತೆಯ ನಾಮಿನಿಯನ್ನಾಗಿ ಮಾಡಬಹುದು, ನಿಶ್ಚಿತ ಠೇವಣಿ ಖಾತೆದಾರರ ಅಕಾಲಿಕ ಮರಣದ ಸಂದರ್ಭದಲ್ಲಿ, ನಾಮಿನಿ ಇನ್ನೂ ಅಪ್ರಾಪ್ತ ವಯಸ್ಕರಾಗಿದ್ದಾಗ, ಠೇವಣಿದಾರರ ಅಕಾಲಿಕ ಮರಣದ ಸಂದರ್ಭದಲ್ಲಿ ಅಪ್ರಾಪ್ತ ವಯಸ್ಕರ ಪರವಾಗಿ ಠೇವಣಿ ಮೊತ್ತವನ್ನು ಸ್ವೀಕರಿಸಲು ಪ್ರಾಪ್ತ ವಯಸ್ಕರ ವಿವರಗಳನ್ನು ನೀಡಬೇಕು ಮತ್ತು ನ್ಯಾಯಾಲಯದ ಆದೇಶ ಪಡೆದಿರಬೇಕು.

**4. ಜಂಟಿ ಸ್ಥಿರ ಠೇವಣಿಗೆ, ನಾಮನಿರ್ದೇಶನವನ್ನು ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ ಮಾಡಬೇಕೇ?**

ಜಂಟಿಖಾತೆಗೆ, ಖಾತೆಯನ್ನು ಹೊಂದಿರುವ ಎಲ್ಲಾ ಠೇವಣಿದಾರರು ಜಂಟಿಯಾಗಿ ನಾಮನಿರ್ದೇಶನ ಮಾಡಬೇಕು.

**5. ಸ್ಥಿರ ಠೇವಣಿ ನವೀಕರಿಸಿದಾಗ, ನಾಮನಿರ್ದೇಶನವನ್ನು ಮತ್ತೆ ಮಾಡಬೇಕೇ?**

ಸ್ಥಿರ ಠೇವಣಿ ನವೀಕರಿಸಿದಾಗ, ಹಿಂದೆ ಮಾಡಿದ ನಾಮನಿರ್ದೇಶನವನ್ನು ನಿರ್ದಿಷ್ಟವಾಗಿ ಬದಲಾಯಿಸದ ಹೊರತು ಅಥವಾ ರದ್ದುಗೊಳಿಸದ ಹೊರತು ಹಾಗೆಯೇ ಮುಂದುವರಿಸಲಾಗುತ್ತದೆ.

ನಾಮಿನಿ ಮತ್ತು ಕಾನೂನುಬದ್ಧ ಉತ್ತರಾಧಿಕಾರಿಯನ್ನು ಹೋಲಿಸುವುದು

ಕಾನೂನುಬದ್ಧ ಉತ್ತರಾಧಿಕಾರಿ ಯಾರು ಮತ್ತು ಅವನು/ಅವಳು ನಾಮಿನಿಗಿಂತ ಹೇಗೆ ಭಿನ್ನರಾಗಿದ್ದಾರೆ? ಕೆಳಗೆ ನೀಡಲಾದ ಕೋಷ್ಟಕವನ್ನು ನೋಡಿ ಮತ್ತು ಇಬ್ಬರ ನಡುವಿನ ವ್ಯತ್ಯಾಸಗಳ ಅವಲೋಕನವನ್ನು ಪಡೆಯಿರಿ.

| ವಿಷಯ | ನಾಮಿನಿ | ಕಾನೂನುಬದ್ಧ ಉತ್ತರಾಧಿಕಾರಿ |
|---|---|---|
| ವ್ಯಾಖ್ಯಾನ | ಖಾತೆದಾರನ ಮರಣದ ಸಂದರ್ಭದಲ್ಲಿ ಹಣವನ್ನು ಸ್ವೀಕ–ರಿಸಲು ಖಾತೆದಾರರಿಂದ ನೇಮಿಸಲ್ಪಟ್ಟ ವ್ಯಕ್ತಿ. | ವಿಲ್ ಅಥವಾ ಉತ್ತರಾಧಿಕಾರ ಕಾನೂನುಗಳ ಪ್ರಕಾರ ಮೃತರ ಆಸ್ತಿಯನ್ನು ಉತ್ತರಾಧಿಕಾರವಾಗಿ ಪಡೆಯುವ ವ್ಯಕ್ತಿ |
| ಉದ್ದೇಶ | ಕಾನೂನುಬದ್ಧ ಉತ್ತರಾಧಿಕಾರಿ/ಗಳಿಗೆ ಹಣವನ್ನು ನಿರ್ವಹಿಸಲು ಅಥವಾ ವರ್ಗಾಯಿಸಲು ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತದೆ. | ಮೃತರ ಆಸ್ತಿಗಳ ಮೇಲೆ ಅರ್ಹತೆ ಇದೆ ಮತ್ತು ಮಾಲೀಕತ್ವದ ಹಕ್ಕುಗಳನ್ನು ಹೊಂದಿದೆ. |
| ನಿಧಿಗಳ ಹಕ್ಕುಗಳು | ನಿಧಿಗಳ ಮೇಲೆ ಮಾಲೀಕತ್ವದ ಹಕ್ಕುಗಳನ್ನು ಹೊಂದಿಲ್ಲ, ಕಸ್ಟೋಡಿಯನ್ ಆಗಿ ಕಾರ್ಯನಿರ್ವಹಿಸುತ್ತದೆ. | ನಿಧಿಗಳು ಮತ್ತು ಸ್ವತ್ತುಗಳಿಗೆ ಸಂಪೂರ್ಣ ಕಾನೂನುಬದ್ಧ ಹಕ್ಕುಗಳನ್ನು ಹೊಂದಿದೆ |
| ಕಾನೂನು ಸ್ಥಿತಿ | ಹಣದ ವರ್ಗಾವಣೆಯನ್ನು ಸುಗಮಗೊಳಿಸುತ್ತದೆ ಆದರೆ ಕಾನೂನುಬದ್ಧ ಉತ್ತರಾಧಿಕಾರಿಯ ಹಕ್ಕುಗಳನ್ನು ಅತಿಕ್ರಮಿಸುವುದಿಲ್ಲ. | ಮೃತರ ಆಸ್ತಿಗಳನ್ನು ಉತ್ತರಾಧಿಕಾರವಾಗಿ ಪಡೆಯಲು ಕಾನೂನಿನಿಂದ ಗುರುತಿಸಲ್ಪಟ್ಟಿದೆ. |
| ಹೊಂದಿಕೊಳ್ಳುವಿಕೆ | ಕುಟುಂಬ ಸದಸ್ಯರಲ್ಲದವರನ್ನು ಒಳಗೊಂಡಂತೆ ಯಾವುದೇ ವಿಶ್ವಾಸಾರ್ಹ ವ್ಯಕ್ತಿಯಾಗಿರಬಹುದು | ಸಾಮಾನ್ಯವಾಗಿ, ಕುಟುಂಬದ ಸದಸ್ಯರನ್ನು ಉತ್ತರಾಧಿಕಾರ ಕಾನೂನುಗಳು ಅಥವಾ ಮೃತರ ವಿಲ್ ಮೂಲಕ ವ್ಯಾಖ್ಯಾನಿಸಲಾಗುತ್ತದೆ. |
| ಬ್ಯಾಂಕ್ ಕಾರ್ಯ ವಿಧಾನಗಳು | ಖಾತೆದಾರರ ಮರಣದ ಸಮಯದಲ್ಲಿ ಹಣವನ್ನು ವರ್ಗಾಯಿಸುವ ಪ್ರಕ್ರಿಯೆಯನ್ನು ಸರಳಗೊಳಿಸುತ್ತದೆ. | ಸ್ವತ್ತುಗಳನ್ನು ಕ್ಲೈಮ್ ಮಾಡಲು ಪ್ರೊಬೇಟ್‌ನಂತಹ ಕಾನೂನು ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ. |
| ಸಂಘರ್ಷದ ಸಾಮರ್ಥ್ಯ | ಆರಂಭದಲ್ಲಿ ಹಣವನ್ನು ಯಾರು ನಿರ್ವಹಿಸುತ್ತಾರೆ ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಮೂಲಕ ವಿವಾದಗಳನ್ನು ಕಡಿಮೆ ಮಾಡುತ್ತದೆ | ಉತ್ತರಾಧಿಕಾರಿ/ಗಳ ನಡುವೆ ಸ್ಪಷ್ಟವಾದ ವಿಲ್ ಅಥವಾ ಒಪ್ಪಂದವಿಲ್ಲದಿದ್ದರೆ ಇದು ವಿವಾದಗಳಿಗೆ ಕಾರಣವಾಗಬಹುದು. |


**ತೀರ್ಮಾನ :**

ಸಂಪೂರ್ಣ ಜ್ಞಾನದೊಂದಿಗೆ ಉಳಿತಾಯ ಸ್ಥಿರ ಠೇವಣಿ ಖಾತೆಯನ್ನು ತೆರೆಯಿರಿ ಮತ್ತು ನಿಮ್ಮ ಹಣವು ಕುಟುಂಬದೊಳಗೆ ಉಳಿಯುವುದನ್ನು ಖಚಿತಪಡಿಸಿಕೊಳ್ಳಲು, ನಿಮ್ಮ ಖಾತೆಗೆ ನಾಮಿನಿಯನ್ನು ನೇಮಿಸಿ. ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯುವಾಗ, ಯಾವಾಗಲೂ ನಾಮಿನಿಯನ್ನು ಹೊಂದಲು ಮರೆಯಬೇಡಿ.

**71ನೇ ಅಖಿಲ ಭಾರತ ಸಹಕಾರ ಸಪ್ತಾಹ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಪ್ರಬಂಧ**

# ಉದ್ಯಮಶೀಲತೆ ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ

– ಶ್ರೀ ಸಂತೋಷ್ ಹೆಚ್.ಜೆ., ಸಹಾಯಕ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.




ಸಹಕಾರ ಕ್ಷೇತ್ರವು ತುಂಬಾ ವಿಶಾಲವಾಗಿದ್ದು ಸಹಕಾರ ತತ್ವದ ಅನುಸಾರ ಎಲ್ಲರಿಗಾಗಿ ತಾನು ಎಲ್ಲರೂ ತನಗಾಗಿ ಎಂಬ ಆಧಾರ ಸ್ತಂಭದ ಮೇಲೆ ಸಹಕಾರ ಕ್ಷೇತ್ರವು ನಿಂತಿರುತ್ತದೆ ಸಹಕಾರ ಕ್ಷೇತ್ರವು ಅತ್ಯಂತ ಅಮೂಲ್ಯವಾದ ಪಾತ್ರವನ್ನು ಪ್ರಪಂಚದಲ್ಲಿ ಮತ್ತು ದೇಶದಲ್ಲಿ ವಹಿಸುತ್ತದೆ. ಏಕೆಂದರೆ ಸಹಕಾರ್ಯ ಕ್ಷೇತ್ರ ಅತಿ ವಿಶಾಲವಾದ ಹಾಗೂ ಎಲ್ಲಾ ಆಯಾಮಗಳನ್ನು ಮೀರಿರುವ ಕ್ಷೇತ್ರವಾಗಿದ್ದು ಭಾರತದಲ್ಲಿ ಸಹಕಾರ ಕ್ಷೇತ್ರವು ಸಾಮಾಜಿಕ, ಆರ್ಥಿಕ, ಸಮುದಾಯ ಅಭಿವೃದ್ಧಿಗೆ ಚಟುವಟಿ–ಕೆಗಳನ್ನು ಉತ್ತೇಜಿಸುವ ಅಂಶವಾಗಿದೆ. ಭಾರತದಲ್ಲಿ ಸಹಕಾರ ಕ್ಷೇತ್ರವು ಮೂರನೇ ಅತಿ ದೊಡ್ಡ ಸೇವಾ ವಲಯವಾಗಿದ್ದು ಮತ್ತು ಉದ್ಯಮ ವಲಯವಾಗಿರುತ್ತದೆ ಭಾರತದ ಹಾಗೂ ಪ್ರಪಂಚದ ಅಭಿವೃದ್ಧಿಯಲ್ಲಿ ಅತಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ಈ ಕ್ಷೇತ್ರವು ಉದ್ಯಮಶೀಲತೆ. ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಇರುವ ಪಾತ್ರವನ್ನು ವಿವರಿಸುವ ಪೂರ್ವದಲ್ಲಿ ಸಹಕಾರ ಕ್ಷೇತ್ರದ ಮಹತ್ವವನ್ನು ತಿಳಿದುಕೊಳ್ಳೋಣ ಸಹಕಾರ ಕ್ಷೇತ್ರ ಅಥವಾ ಸಹಕಾರ ಸಂಸ್ಥೆಗಳು ಯಾವುದೇ ದೇಶದ, ರಾಜ್ಯದ, ಜಿಲ್ಲೆಯ ಹಾಗೂ ಸ್ಥಳೀಯ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ಮತ್ತು ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿರುತ್ತದೆ ಏಕೆಂದರೆ 2023ರ ವರದಿಯ ಪ್ರಕಾರ ದೇಶದಲ್ಲಿ ಒಟ್ಟು 8.6 ಲಕ್ಷ ಸಹಕಾರಿ ಸಂಸ್ಥೆಗಳಿದ್ದು 30 ಕೋಟಿ–ಗಿಂತಲೂ ಅಧಿಕ ಸದಸ್ಯತ್ವವನ್ನು ಹೊಂದಿರುವ ಬೃಹತ್ ಸೇವಾ ವಲಯವಾಗಿರುತ್ತದೆ ದೇಶದ ಗ್ರಾಮೀಣ ಪ್ರದೇಶ ಜನರಿಗೆ ಬೇಕಾಗುವ ಶೇಕಡ 30ಕ್ಕಿಂತ ಹೆಚ್ಚಿನ ಸಾಲವನ್ನು ಸಾಲದ ಅವಶ್ಯಕತೆಯನ್ನು ಸಹಕಾರಿ ಸಂಸ್ಥೆಗಳು ಒದಗಿಸುತ್ತ ಬಂದಿರುತ್ತದೆ. ಸಹಕಾರಿ ಸಂಸ್ಥೆಗಳು ಕೃಷಿಗೆ ಮತ್ತು ಕೃಷಿಗೆ ಸಂಬಂಧಿಸಿದ ಉತ್ಪಾದನೆಯನ್ನು ಹೆಚ್ಚಿಸುವ ಶೇಕಡ 20 ರಿಂದ 25 ಸಹಕಾರಿಗಳಾಗಿರುತ್ತದೆ. ಕೃಷಿ ಮತ್ತು ರೈತರ ಅಭಿವೃದ್ಧಿ ಸಚಿವಾಲಯದ ವರದಿಯ ಪ್ರಕಾರ 5000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ದೇಶದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂಸ್ಥೆಗಳಾಗಿರುವುದಾಗಿ ವರದಿ ಇರುತ್ತದೆ.

**ಉದ್ಯಮಶೀಲತೆ :** ಯಾವುದೇ ದೇಶ ಅಭಿವೃದ್ಧಿ ಹಾದಿಯಲ್ಲಿ ಮುನ್ನಡೆಯಸಬೇಕೆಂದರೆ ಅ ದೇಶದಲ್ಲಿ ಅತಿ ಹೆಚ್ಚು ಉದ್ಯಮಗಳ ಅವಶ್ಯಕತೆ ಇರುತ್ತದೆ ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಉದ್ಯಮಗಳ ಪಾತ್ರ ಅತಿ ಪ್ರಮುಖವಾಗಿರುತ್ತದೆ, ಅದೇ ರೀತಿಯಲ್ಲಿ ಸಹಕಾರಿಯ ಕ್ಷೇತ್ರದಲ್ಲಿಯೂ ಸಹ ಅತಿ ಹೆಚ್ಚು ಉತ್ಪಾದನಾ ಸೇವಾ ಉದ್ಯಮವನ್ನು ಹೊಂದಿದ್ದು ಭಾರತ ದೇಶದಲ್ಲಿ 2023ರ ವರದಿಯ ಪ್ರಕಾರ 8.6 ಲಕ್ಷ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು ಸೇವ ಉದ್ಯಮಶೀಲತೆಯನ್ನು ಭಾರತದಂತಹ ರಾಷ್ಟ್ರದಲ್ಲಿ ಹೆಚ್ಚಿಸುವುದರಿಂದ ಅತಿ ಅವಶ್ಯಕವಾಗಿರುತ್ತದೆ. ಸಹಕಾರಿಗಳು ಸಮರ್ಥನೀಯ ಮತ್ತು ಸ್ಪರ್ಧಾತ್ಮಕ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಒದಗಿಸುವ ಜವಾಬ್ದಾರಿಯುತ ಹಾಗೂ ಪ್ರಮಾಣಿಕ ಮತ್ತು ವಾಣಿಜ್ಯೋದ್ಯಮ ಸಹಕಾರಿ ಮೌಲ್ಯದಿಂದ ಮಾರ್ಗದರ್ಶಿಸಲ್ಪಡುವ ಒಂದು ಬಲವಾದ ಮತ್ತು ಕಾರ್ಯಸಾಧ್ಯವಾದ ಸಹಕಾರಿ ಸಂಸ್ಥೆಯಾಗುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತದೆ ಪ್ರಮುಖವಾಗಿ ಬ್ಯಾಂಕಿಂಗ್ ಹಣಕಾಸು ಲೆಕ್ಕಪತ್ರ, ಕೃಷಿ, ಮೀನುಗಾರಿಕೆ, ಹೈನುಗಾರಿಕೆ, ಸಾವಯವ, ಹೀಗೆ ಅನೇಕ ಸೇವಾ ವಲಯವನ್ನು ನಿರ್ಧರಿಸುವ ಉದ್ಯಮಗಳನ್ನು ಸ್ಥಾಪಿಸಲು ಮತ್ತು ನೂತನವಾಗಿ ಉದ್ಯಮಶೀಲತೆಯನ್ನು ಇಷ್ಟಪಡುವವರನ್ನು ಆಕರ್ಷಿಸುತ್ತದೆ ಮತ್ತು ಉದ್ಯಮಶೀಲತೆಯನ್ನು ಪ್ರೇರೇಪಿಸುತ್ತದೆ ಸಹಕಾರಿ ಸಂಸ್ಥೆಗಳನ್ನು ಸೇವ ಉದ್ಯಮಗಳಾಗಿ ಪ್ರಾರಂಭಿಸಲು ಒಂದು ಅವಕಾಶದ ರೀತಿಯಲ್ಲಿ ಬಳಸಿಕೊಂಡು ಮತ್ತು ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸಲು ಉತ್ತಮವಾದ ವೇದಿಕೆಯನ್ನು ಸಿದ್ಧಪಡಿಸುತ್ತದೆ.

ಭಾರತದಂತಹ ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರಗಳಿಗೆ ಸಹಕಾ–ರಿಯು ಉದ್ಯಮಶೀಲತೆಯನ್ನು ಮತ್ತು ಉದ್ಯಮಗಳನ್ನು ಬೆಳೆಸುವುದರಲ್ಲಿ ತುಂಬಾ ಪರಿಣಾಮಕಾರಿಯಾದ ಬಳಕೆ ಮಾಡಿಕೊಳ್ಳಬಹುದಾಗಿದೆ ಏಕೆಂದರೆ ಸಹಕಾರಿಯೂ ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿರದೆ

ಎಲ್ಲ ಕ್ಷೇತ್ರದಲ್ಲಿಯೂ ವಿಸ್ತಾರವಾಗಿ ಬೆಳೆಯುವುದರಿಂದ ಉದ್ಯಮ ಮತ್ತು ಉದ್ಯಮಶೀಲತೆಯನ್ನು ಬಹಳ ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಸ್ಥಾಪನೆಯನ್ನು ಮಾಡಲು ಪ್ರೇರೇಪಿಸುತ್ತದೆ.

**ಉದ್ಯೋಗ :** ಯಾವುದೇ ದೇಶದ ಪ್ರಗತಿಯನ್ನು ನಿರ್ಧರಿಸುವ ಮತ್ತು ಜನರ ಜೀವನ ಮಟ್ಟವನ್ನು ಸುಧಾರಿಸಲು ಇರುವ ಏಕೈಕ ಅತಿ ಪ್ರಮುಖವಾದ ಅಸ್ತ್ರ ಉದ್ಯೋಗವಾಗಿದ್ದು ಅಭಿವೃದ್ಧಿ ಶೀಲಾ ದೇಶಗಳಿಗೆ ಉದಾಹರಣೆಗೆ ಭಾರತದಂತಹ 140 ಕೋಟಿ ಜನಸಂಖ್ಯೆ ಹೊಂದಿರುವ ದೇಶಕ್ಕೆ ನಿರುದ್ಯೋಗವು ಅತಿ ದೊಡ್ಡ ಸಮಸ್ಯೆಯಾಗಿದ್ದು ಎಲ್ಲರಿಗೂ ಉದ್ಯೋಗದ ಅವಶ್ಯಕತೆ ಇದ್ದು ಉದ್ಯೋಗ ನೀಡುವುದು ಸರ್ಕಾರಕ್ಕೆ ಅತಿ ದೊಡ್ಡ ತಲೆನೋವು ಆಗಿ ಪರಿಣಮಿಸಿದೆ ಇಂತಹ ಸಂದರ್ಭದಲ್ಲಿ ಸಹಕಾರ ಕ್ಷೇತ್ರ ಉದ್ಯೋಗವನ್ನು ಒದಗಿಸುತ್ತಿದ್ದು ಜನರಿಗೆ ಉತ್ತಮವಾದ ಅವಕಾಶ ಮತ್ತು ವೇದಿಕೆಯನ್ನು ಸಹಕಾರ ಕ್ಷೇತ್ರ ರೂಪಿಸುತ್ತಿದೆ, ಒಂದು ವರದಿಯ ಪ್ರಕಾರ ಭಾರತದಲ್ಲಿ ಸಹಕಾರ ಕ್ಷೇತ್ರವು ಕೋಟಿಗಿಂತಲೂ ಹೆಚ್ಚು ಉದ್ಯೋಗವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ವೃದ್ಧಿಸುತ್ತದೆ ಹಾಗೂ ದೇಶದ ಪ್ರತಿಯೊಂದು ರಾಜ್ಯದಲ್ಲಿಯೂ ಸಹಕಾರ ಕ್ಷೇತ್ರ ಮೂರನೇ ಅತಿ ದೊಡ್ಡ ಉದ್ಯಮ ವಲಯವಾಗಿ ಬೆಳೆದು ನಿಂತಿರುತ್ತದೆ.

ಭಾರತದಲ್ಲಿ ವಿವಿಧ ರೀತಿಯ ಸಹಕಾರ ಕ್ಷೇತ್ರವಿರುವುದರಿಂದ ಉದ್ಯೋಗ ಸೃಷ್ಟಿಯು ತುಂಬಾ ಸುಲಭವಾಗಿರುತ್ತದೆ ಮತ್ತು ಗ್ರಾಮೀಣ ಭಾಗದಲ್ಲಿ ಉದ್ಯೋಗವನ್ನು ಸ್ಥಳೀಯವಾಗಿ ನೀಡುವುದರಿಂದ ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸಬಹುದಾಗಿದ್ದು, ವರದಿಯ ಪ್ರಕಾರ ಶೇಕಡ 90 ರಷ್ಟು ಸಹಕಾರ ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿ ಸ್ಥಾಪನೆ ಆಗಿರುವುದರಿಂದ ಸ್ಥಳೀಯವಾಗಿ ಮತ್ತು ಗ್ರಾಮೀಣ ಜನರಿಗೆ ಸುಲಭವಾಗಿ ಉದ್ಯೋಗವನ್ನು ಒದಗಿಸುವುದರ ಮೂಲಕ ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಬರುವುದನ್ನು ತಡೆಗಟ್ಟಬಹುದಾಗಿದೆ. ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಕ್ರೆಡಿಟ್, ಬ್ಯಾಂಕಿಂಗ್ ಹೌಸಿಂಗ್, ಸಾರಿಗೆ ಸಂಬಂಧಿಸಿದ ಹೀಗೆ ಅನೇಕ ವಲಯದಲ್ಲಿ ಸಹಕಾರ ಕ್ಷೇತ್ರವು ಇರುವುದರಿಂದ ಸ್ಥಳೀಯ ಪ್ರತಿಭೆಗಳಿಗೆ ಉತ್ತಮವಾದ ವೇದಿಕೆಯನ್ನು ಒದಗಿಸುತ್ತದೆ. ಸಹಕಾರ ಕ್ಷೇತ್ರವು ಹೆಚ್ಚು ಉದ್ಯೋಗವನ್ನು ಒದಗಿಸುವುದರಿಂದ ಸುಸ್ಥಿರವಾದ ಭಾರತ ಬೆಳವಣಿಗೆಗೆ ಸಹಕಾರ ಕ್ಷೇತ್ರ ಪ್ರಮುಖ ಪಾತ್ರವನ್ನು ವಹಿಸುತ್ತದೆ, ಸಹಕಾರ ಕ್ಷೇತ್ರವು ಮಹಿಳೆಯರಿಗೆ ಉದ್ಯೋಗ ನೀಡುವುದರಿಂದ ಮಹಿಳಾ ಸಬಲೀಕರಣಕ್ಕೆ ಹೊತ್ತು ನೀಡುತ್ತದೆ ಮತ್ತು ಮಹಿಳೆಯರು ಸಹ ಅತಿ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗವನ್ನು ಪಡೆಯುವುದರಿಂದ ಪುರುಷ ಮತ್ತು ಮಹಿಳೆಯರ ನಡುವಿನ ಜವಾಬ್ದಾರಿಯಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲು ನೆರವಾಗುತ್ತದೆ ಸಹಕಾರಿಗಲು ಉದ್ಯೋಗವನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದರಿಂದ ದೇಶದ ಆರ್ಥಿಕ ಸ್ಥಿತಿ ಜನರ ಜೀವನಮಟ್ಟ ಉತ್ತಮವಾಗಿ ಮತ್ತು ಪ್ರಗತಿಯಾಗುವುದರಿಂದ ಸಹಕಾರಿ ಕ್ಷೇತ್ರದಿಂದ ನಿರುದ್ಯೋಗ ಸಮಸ್ಯೆಗೆ ಔಷಧಿಯಾಗಿ ಬಳಸಿಕೊಳ್ಳಬಹುದಾಗಿದೆ ಸಹಕಾರ ಕ್ಷೇತ್ರಕ್ಕೆ ಉದ್ಯೋಗ ಕೌಶಲ್ಯ ಅಭಿವೃದ್ಧಿಯು ಸಹಕಾರಿ ಸಂಘಕ್ಕೆ ಮತ್ತು ದೇಶಕ್ಕೆ ಬೇಕಾಗುವ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದರಲ್ಲಿ ಗಣನೀಯವಾದ ಪಾತ್ರವನ್ನು ವಹಿಸುತ್ತದೆ, ಏಕೆಂದರೆ ಸಹಕಾರಿ ಕ್ಷೇತ್ರವು ಮೂಲ ಕ್ಷೇತ್ರವಾಗಿದ್ದು ಯಾವುದೇ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಬೇಕಾಗುವ ಪ್ರಾಥಮಿಕ ಕೌಶಲ್ಯವನ್ನು ನೀಡುವ ಕಾರ್ಯದಲ್ಲಿ ಅಥವಾ ಒದಗಿಸುವ ಕಾರ್ಯದಲ್ಲಿ ಸಹಕಾರ ಕ್ಷೇತ್ರ ನಿರಂತರವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾ ಬಂದಿರುತ್ತದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಸಚಿವಾಲಯದ ವರದಿಯ ಪ್ರಕಾರ ಸಹಕಾರ ಕ್ಷೇತ್ರವು ಮೂರು ಲಕ್ಷಕ್ಕೂ ಅಧಿಕ ಜನರಿಗೆ ಪ್ರತಿ ವರ್ಷ ಕೌಶಲ ಅಭಿವೃದ್ಧಿ ತರಬೇತಿ ನೀಡುತ್ತಾ ಬಂದಿದ್ದು ಉತ್ತಮವಾದ ಸಹಕಾರಿಯನ್ನು ಮತ್ತು ಉದ್ಯೋಗವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಉತ್ತಮವಾದ ಕೌಶಲ್ಯವನ್ನು ಹೊಂದಿರುವುದು ಆಧುನಿಕ ಯುಗದಲ್ಲಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ಸಹಕಾರಿ ಸಂಘದಲ್ಲಿ ತೊಡಗಿಸಿಕೊಂಡವರು ತಮ್ಮನ್ನು ತಾವು ಕ್ರಿಯಾಶೀಲರಾಗಿ ಅಭಿವೃದ್ಧಿ ಪಡಿಸಿಕೊಳ್ಳಲು ಶ್ರಮಿಸುವುದರಿಂದ ಯಾವುದೇ ಕ್ಷೇತ್ರಕ್ಕೆ ಹೋದರು ಸಹ ಸಹಕಾರಿ ಕ್ಷೇತ್ರದಲ್ಲಿ ಪಡೆದಿರುವ ಅನುಭವ ಮತ್ತು ಕೌಶಲ್ಯವನ್ನು ತಾವುಗಳೂ ಪ್ರತಿನಿಧಿಸುವ ಕ್ಷೇತ್ರದಲ್ಲಿ ಬಳಸಿಕೊಳ್ಳಲು ಸಹಕಾರಿ ಸಂಘವು ತರಬೇತುದಾರರ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತದೆ ಮತ್ತು ಕೌಶಲ್ಯ ಮತ್ತು ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವುದರಲ್ಲಿ ಹೊಸ ಕಲ್ಪನೆಯೊಂದಿಗೆ ನವಯುಗದ ಸವಾಲುಗಳನ್ನು ಎದುರಿಸಲು ಸಾಧ್ಯವಾಗುತ್ತದೆ.

**ಉಪಸಂಹಾರ:**

ಸಹಕಾರಿ ರಂಗವು ಉದ್ಯಮಶೀಲತೆಯನ್ನು ಪ್ರೇರೇಪಿಸುವುದರ ಜೊತೆಗೆ ಇದಕ್ಕೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಒದಗಿಸಿ ದೇಶಕ್ಕೆ ಮಾರಕವಾಗಿರುವ ನಿರುದ್ಯೋಗ ಸಮಸ್ಯೆಯನ್ನು ಗ್ರಾಮೀಣ ಮಟ್ಟದಲ್ಲಿ ಸುಧಾರಿಸುವುದರ ಮೂಲಕ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ಜನರ ಜೀವನ ಶೈಲಿಯನ್ನು ತಕ್ಕಮಟ್ಟಿಗೆ ಸಮತೋಲನದಿಂದ ಇರುವಂತೆ ನೋಡಿಕೊಂಡಿರುತ್ತದೆ. ಸಹಕಾರಿ ಕ್ಷೇತ್ರವು ತುಂಬಾ ವಿಶಾಲವಾಗಿದ್ದು ಯಾವುದೇ ರೀತಿಯ ಉದ್ಯಮಗಳನ್ನು ಸ್ಥಾಪಿಸುವ ಉದ್ಯಮಶೀಲತೆಯನ್ನು ಜನರಲ್ಲಿ ಹುಟ್ಟಿಸುತ್ತದೆ. ಸಹಕಾರಿಯು ಜನರ ಜೀವನ ಮಟ್ಟವನ್ನು ಹಾಗೂ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಅತಿ ಪ್ರಮುಖವಾಗಿದೆ.

# ಸಹಕಾರ ತತ್ವದ ಉಗಮ, ಸ್ವರೂಪ ಮತ್ತು ಸಂಘಟನೆ

– ಶ್ರೀ ಶಂಕರ ಹೆಗಡೆ, ಸಹಕಾರಿ ಸಲಹೆಗಾರರು, ತುಮಕೂರು




**ಪೀಠಿಕೆ:** ಪ್ರಾಣಿ ಸಂಕುಲ, ಪಕ್ಷಿ ಸಂಕುಲ ಮುಂತಾದ ಪದಪುಂಜುಗಳೇ ಸಾಂಘಿಕ ಬದುಕಿನ ಮೂಲ, ಧ್ವನಿ ಮನುಷ್ಯನ ಸಂಘ ಜೀವನಕ್ಕೆ ಈ ಮೂಲ ಧ್ವನಿಯೇ ಬುನಾದಿ, ಮದುವೆ ಮುಂತಾದ ಮಂಗಳ ಕಾರ್ಯಗಳಲ್ಲಿ ಮರಣವೇ ಮೊದಲಾದ ದುರಂತಗಳಲ್ಲಿ ಮಾನವ ಸಾಂಘಿಕ ಸಹಕಾರಿ ಬಗೆಯಲ್ಲಿ ಒಂದಾಗುತ್ತಿದ್ದೆ, ಹಿಂದಿನ ಕಾಲದಲ್ಲಿ ಸಾಂಘಿಕ ಸಹಕಾರಿ ತತ್ವ ಅಡಗಿತ್ತು ಎಂಬುದಕ್ಕೆ ಈ ಮಾತುಗಳು ಪುಷ್ಟಿ ನೀಡುತ್ತವೆ. ತನ್ನ ಮೂಲ ಧ್ವನಿ ತತ್ವಗಳೊಂದಿಗೆ ಕಳೆದ ಶತಮಾನಕ್ಕೆ ಮುಂಚಿತವಾಗಿ ಅಸಂಘಟಿತ ರೂಪದಲ್ಲಿ ಪ್ರಚಲಿತವಾಗಿತ್ತು.

**ಉಗಮ :** ಸಾವಿರಾರು ವರ್ಷಗಳಿಂದ ಮಾನವ ಸಮಾಜ ಜೀವಿಯಾಗಿ ಪರಸ್ಪರ ಹೊಂದಾಣಿಕೆಯಿಂದ ತಮ್ಮ ತಮ್ಮ ಪುಟ್ಟ ಪರಿಧಿಯಲ್ಲಿಯೇ ಶಾಂತಿಯುತವಾಗಿ ಬದುಕುತ್ತಿದ್ದ. ಆದರೆ 18ನೇ ಶತಮಾನದ ಔದ್ಯೋಗಿಕ ಕ್ರಾಂತಿಯು ಶತಶತಮಾನಗಳ ಮನುಷ್ಯನ ಬದುಕಿನ ರೀತಿ ನೀತಿಗಳನ್ನು ಬದಲಾಯಿಸಿತು. ಯಂತ್ರಗಳ ಆಗಮನದಿಂದ ಸಾಮಾನ್ಯ ಜನ ತಮ್ಮ ಉದರ ಪೋಷಣೆಯ ಉದ್ಯೋಗಗಳನ್ನು ಕಳೆದುಕೊಂಡು ಕಾರ್ಖಾನೆಗಳಲ್ಲಿ ಕೂಲಿಕಾರರಾಗಿ ಸೇರಿಕೊಂಡರು. ಶ್ರೀಮಂತ ವ್ಯಕ್ತಿಗಳು ಕೇವಲ ಹಣದಾಸೆಗಾಗಿ ಮಾನವೀಯ ಮೌಲ್ಯಗಳನ್ನು ತ್ಯಜಿಸಿ ಬಡ ಜನರನ್ನು ಶೋಷಣೆ ಮಾಡಲು ಪ್ರಾರಂಭಿಸಿದರು. ಈ ಪರಿಸ್ಥಿತಿಯಲ್ಲು ಸಾಮಾಜಿಕ ನ್ಯಾಯ ನಶಿಸಿ ಹೋಯಿತು. ಆಗ ಉಗಮವಾದ ಸಹಕಾರ ಹೊಸ ರೂಪ ತಾಳಿ ಸಮಾಜಕ್ಕೆ ಬೆಳಕಾಗಿ ಮತ್ತು ದಾರಿ ದೀಪವಾಗಿ ಬಂತು.

**ಯುರೋಪದಲ್ಲಿ ಸಹಕಾರದ ಉಗಮ :** ಶೋಷಣಾರಹಿತ ಸಮಾಜದ ನಿರ್ಮಾಣಕ್ಕಾಗಿ ಹಲವಾರು ಚಿಂತಕರು ಹೊಸ ಮಾರ್ಗಗಳನ್ನು ಶೋಧಿಸಿದರು. ಅಂತಹ ಚಿಂತಕರಲ್ಲಿ ಪ್ರಖ್ಯಾತಗೊಂಡ ರಾಬರ್ಟ್ ಓವನ್ ಪ್ರಥಮರು, ಲಂಡನ್ ಸಮೀಪದ ರಾಕ್ ಡೇಲ ಎಂಬ ಊರಿನಲ್ಲಿ 28/10/1844 ರಂದು 'ರಾಕಡೇಲ್ ಪಯನಿಯರ್ಸ್ ಕೋ– ಅಪರೇಟಿವ್ ಸೊಸೈಟಿ ಲಿಮಿಟೆಡ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಇದರ ಮುಖಾಂತರ ರಾಬರ್ಟ್ ಓವನ್ನರೇ ಆಧುನಿಕ ಸಹಕಾರಿ ವಿಚಾರಣಾ ಪ್ರಣಾಳಿಕೆಗೆ ತಳಹದಿಯನ್ನು ಹಾಕಿದರೆಂದು ಹೇಳಬಹುದು. ಹೀಗೆ 28–10–1844 ರಲ್ಲಿ ಜಗತ್ತಿನಲ್ಲಿ ಪ್ರಾರಂಭಗೊಂಡ ಸಹಕಾರ ಚಳುವಳಿ ಎಲ್ಲಾ ದೇಶಗಳಲ್ಲಿಯೂ ಹಬ್ಬಿತು.

**ಭಾರತದಲ್ಲಿ ಸಹಕಾರದ ಹುಟ್ಟು :** ನಮ್ಮ ದೇಶದಲ್ಲಿ ಬ್ರಿಟೀಷ್ ಸರ್ಕಾರ ಪ್ರಥಮ ಸಹಕಾರ ಕಾಯ್ದೆಯನ್ನು ಮಾರ್ಚ್ 25 1904 ರಲ್ಲಿ ಜಾರಿಗೆ ತಂದಿತು. ಭಾರತದಲ್ಲಿ ಸಹಕಾರ ಕ್ಷೇತ್ರವು ಸರ್ಕಾರದ ಕೃಪಾ ಪೋಷಿತವಾಗಿ ಹುಟ್ಟಿ ಬಂದಿದೆ. ಈಗಲೂ ಸಹ ಸ್ವಲ್ಪ ಮಟ್ಟಿಗೆ ಮುಂದುವರಿಯುತ್ತಿರುವುದು ಗಮನಾರ್ಹ ಸಂಗತಿ 08–05–1905ರಲ್ಲಿ ಗದಗ್ ಜಿಲ್ಲೆಯ ಕಣಗಿನ ಹಾಳ ಎಂಬ ಗ್ರಾಮದಲ್ಲಿ ದಿವಗಂತ ಎಸ್ ಪಾಟೀಲ್ ಇವರ ಮಾರ್ಗದರ್ಶನದಲ್ಲಿ ಪ್ರಥಮ ಸಹಕಾರ ಸಂಘ ಕೃಷಿ ಪತ್ತಿನ ಸಹಕಾರ ಸಂಘವಾಗಿ ಜನ್ಮ ತಾಳಿರುವುದು ಕೃಷಿಗೆ ಮತ್ತು ಕೃಷಿಕರಿಗೆ ಈ ಚಳುವಳಿ ನಮ್ಮ ದೇಶದಲ್ಲಿ ಪ್ರಾರಂಭಗೊಂಡಿರುವುದು ಐತಿಹಾಸಿಕ ಸತ್ಯ ತದ ನಂತರ 1912 ರ ಸಹಕಾರಿ ತಿದ್ದುಪಡಿ ಕಾಯ್ದೆ ವಿವಿಧ ರೀತಿಯ ಸಹಕಾರ ಸಂಘಗಳನ್ನು ಅಂದರೆ ಕೃಷಿ ಮಾರಾಟ, ಗ್ರಾಹಕ, ಹೈನುಗಾರಿಕೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಸಹಕಾರಿ ಕ್ಷೇತ್ರಗಳು ನೋಂದಣಿಗೊಂಡು ಹಲವು ಕ್ಷೇತ್ರಗಳಲ್ಲಿ ಅದ್ಭುತ ಸಾಧನೆಗಳನ್ನು ಮಾಡಿ ಯಶಸ್ವಿಯಾಗಿವೆ.

**ಸಹಕಾರ ಸಂಘಗಳ ವೈಶಿಷ್ಟ್ಯ :** ಸಾಮಾನ್ಯ ಜನರು ಸಹಕಾರಿ ಸಂಘವೆಂದರೆ ಸಾರ್ವಜನಿಕ ಸಂಘವೆಂದು ತಿಳಿದಿದ್ದಾರೆ. ಸಹಕಾರಿ ಸಂಘವು ಸಾರ್ವಜನಿಕ ಸಂಸ್ಥೆಯಲ್ಲಿ ಸಂಘವು ಕೆಲವೊಂದು ಉದ್ದೇಶಗಳನ್ನು ಇಟ್ಟುಕೊಂಡು ಆ ಉದ್ದೇಶಗಳಲ್ಲಿ ಆಸಕ್ತಿ ಹೊಂದಿದ ವ್ಯಕ್ತಿಗಳು ಆ ಸಂಘದ ಸದಸ್ಯರಾಗಿ, ಆ ಸಂಘದ ಮುಖಾಂತರ ತಮ್ಮ ಉದ್ದೇಶಗಳನ್ನು ಈಡೇ–ರಿಸಿಕೊಳ್ಳುವರು ಸಂಘದ ಮೂಲೋದ್ದೇಶ. ತನ್ನ ಸದಸ್ಯರ ಆರ್ಥಿಕ ಉನ್ನತಿಯನ್ನು ಹೊಂದುವುದಾಗಿರುತ್ತದೆ.ಇದಕ್ಕೆ ಪೂರಕವಾಗಿ ಸಾಮಾಜಿಕ ಕೆಲಸಗಳನ್ನು ತಮ್ಮ ಪರಿಧಿಯಲ್ಲಿ ಕೈಕೊಳ್ಳಬಹುದು ಸಹಕಾರಿ ಸಂಘದ ಎಲ್ಲ ಸದಸ್ಯರು ಸಮಾನ ಹಕ್ಕುದಾರರು. ಅವರು ರಚಿಸಿಕೊಂಡ ಸಂಘದ ಏಳು ಬೀಳಿಗೆ ಸದಸ್ಯರೇ ಹೊಣೆಗಾರರಾಗುತ್ತಾರೆ. ಸಹಕಾರಿ ಸಂಘ ಒಂದು ಅವಿಭಕ್ತ ಕುಟುಂಬ ಇದ್ದ ಹಾಗೆ ಸಂಘದ ಲಾಭ ಹಾನಿಗೆ ಸದಸ್ಯರಷ್ಟೇ ಹೊಣೆಗಾರರು. ಸದಸ್ಯರಲ್ಲದವರಿಗೆ ಸಂಘದ ವ್ಯವಹಾರಗಳನ್ನು ಪ್ರಶ್ನೆ ಮಾಡುವ ಹಕ್ಕು ಇರುವುದಿಲ್ಲ.

**ಉಪಸಂಹಾರ:** ಪ್ರಜಾಸತ್ತಾತ್ಮಕ ಪದ್ಧತಿಯನ್ನು ಅನುಸರಿಸಿ ಸದಸ್ಯರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಆಡಳಿತ ನಡೆಸುತ್ತಿರುವ ಸಹಕಾರ ಚಳುವಳಿ ಮಹಾತ್ಮ ಗಾಂಧೀಜಿರವರು ಹೇಳಿದಂತೆ "ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು" ಎಂಬುದು ಐತಿಹಾಸಿಕ ಸತ್ಯ. ಅನೇಕ ಸಲ ದುರಾಡಳಿತ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ರಾಜಕೀಯ ಹಸ್ತಕ್ಷೇಪ ಮುಂತಾದವುಗಳು ಅಲ್ಲಲ್ಲಿ ಪವಿತ್ರವಾದ ಸಹಕಾರ ಚಳುಚಳಿಯ ಬೆಳವಣಿಗೆಯಲ್ಲಿ ಪ್ರವೇಶಿಸಿದರು ಸಹ ಸಹಕಾರ ಸಂಘಗಳು ಒಂದು ಉತ್ತಮ ಆರ್ಥಿಕ ಪದ್ಧತಿಯಾಗಿ ಸಾಮಾನ್ಯ ಜನತೆಯ ಆರ್ಥಿಕ, ಸಾಮಾಜಿಕ ಉನ್ನತಿಗಾಗಿ ಶ್ರಮಿಸುತ್ತಿವೆ. ಒಟ್ಟಿನಲ್ಲಿ ಹೇಳಬೇಕಾದರೆ ಸಹಕಾರಿ ಕ್ಷೇತ್ರದಲ್ಲಿ ಪ್ರಾಮಾಣಿಕತೆ, ದಕ್ಷತೆ, ಮಾನವೀಯ ಗುಣಗಳಿಂದ ಮಾತ್ರ ಸಹಕಾರದ ಮೂಲ ಉದ್ದೇಶದ ಗುರಿಗಳನ್ನು ಸಾಧಿಸಲು ಸಾಧ್ಯವೆಂದು ಹೇಳಬಹುದು.

"ಸಹಕಾರಂ ಗೆಲ್ಗೆ ಸಹಕಾರಂ ಬಾಳ್ಗೆ"

# ತೊಟ್ಟಿಲತೂಗುವ ಕೈ ದೇಶದ ಅಭಿವೃದ್ಧಿಯ ಸಾರಥ್ಯದತ್ತ

– ಶ್ರೀಮತಿ ಸವಿತ ಎನ್. ಇ. ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು




**ಅಂತರರಾಷ್ಟ್ರೀಯ ಮಹಿಳಾ ದಿನ ಧ್ಯೇಯ – ಕ್ರಿಯೆಯನ್ನು ವೇಗಗೊಳಿಸಿ– (Accelerate Action)**

**ಮನೆಮನೆಯಲಿ ದೀಪ ಉರಿಸಿ ಹೊತ್ತುಹೊತ್ತಿಗೆ ಅನ್ನ ಉಣಿಸಿ**
**ತಂದೆ ಮಗುವ ತಬ್ಬಿದಾಕೆ ನಿನಗೆ ಬೇರೆ ಹೆಸರು ಬೇಕೇ**
**ಸ್ತ್ರೀ ಎಂದರೆ ಅಷ್ಟೇ ಸಾಕೆ–ಜಿಎಸ್ಎಸ್**

ಮಹಿಳೆ ಭೂಮಿಯಾಗಿ, ಮುಗಿಲಾಗಿ, ಮೇರುಪರ್ವತವಾಗಿ ಬೆಳೆದು ನಿಂತಿದ್ದಾಳೆ. ಹಾಗಾಗಿ ಮಹಿಳೆಯನ್ನು ಸಮೃದ್ದಿಯ ಸಂಕೇತವೆಂದು ಪರಿಭಾವಿಸಲಾಗಿದೆ. ಇಡಿ ವಿಶ್ವವೇ ಆರೋಗ್ಯಕರ ಮನೋಭಾವ ಹೊಂದಲು ಸಹಕಾರ ಶಕ್ತಿ ಮಹಿಳೆಯಾಗಿದ್ದಾಳೆ. ಮಹಿಳೆಯು ನಿರ್ವಹಿಸುವ ಪ್ರಕ್ರಿಯೆಗಳಿಗೆ ವೇಗವನ್ನು ನೀಡುವುದೇ ಈ ವರ್ಷದ ಆಚರಣೆಯ ಧ್ಯೇಯವಾಕ್ಯವಾಗಿದೆ.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರತಿ ವರ್ಷ ಮಾರ್ಚ್ 8 ರಂದು ಆಚರಿಸಲ್ಪಡುತ್ತದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಎಂದರೆ ಬಂಡವಾಳಶಾಹಿ ಶೋಷಣೆಯ ವಿರುದ್ಧ ಮಹಿಳಾ ವಿಮೋಚನೆಗಾಗಿ ನಡೆದ ಸಮಾಜವಾದಿ ಹೋರಾಟದ ಪರಂಪರೆ ಎನ್ನುವುದನ್ನು ಮರೆಯಬಾರದು. ನೂರ ಮೂರು ವರ್ಷಗಳ ಹಿಂದೆ 1910ರ ಆಗಸ್ಟ್ 27ರಂದು ಕ್ರಾಂತಿಕಾರಿ ನಾಯಕರಾದ ಕ್ಲಾರಾ ಜೆಟ್ಕಿನ್ ಅವರ ಸಂಗಾತಿಗಳಾದ ಅಲೆಕ್ಸಾಂಡ್ರಿಯಾ ಕೊಲಾಂಥೈ ಮತ್ತು ಇತರರೊಂದಿಗೆ ಸಂಘಟಿಸಿದ್ದ ಅಂತಾರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮ್ಮೇಳನದಲ್ಲಿ 'ಅಂತಾರಾಷ್ಟ್ರೀಯ ಮಹಿಳಾ ದಿನ' ಆಚರಿಸುವ ಕುರಿತ ನಿರ್ಣಯ ಮಂಡಿಸಿದರು. ಆ ನಂತರ ಅಮೇರಿಕದಲ್ಲಿ ಸಮಾಜವಾದಿ ಮಹಿಳೆಯರು ಅದಾಗಲೆ 1908ರಲ್ಲಿ ರಾಷ್ಟ್ರೀಯ ಮಹಿಳಾ ದಿನವನ್ನು ಮೊಟ್ಟ ಮೊದಲು ಆಚರಿಸಿದರು. ಭಾರತದಲ್ಲಿ ಮೊದಲ ಬಾರಿಗೆ 1931ರಲ್ಲಿ ಲಾಹೋರ್ನಲ್ಲಿ ಸಂಘಟಿಸಿದ್ದ 'ಸಮಾನತೆಗಾಗಿ ಏಷ್ಯಾದ ಮಹಿಳಾ' ಸಮಾವೇಶದಲ್ಲಿ ಈ ದಿನಾಚರಣೆ ಆಚರಿಸಲಾಯಿತು. ಮಹಿಳೆಯರಿಗೆ ಸಮಾನತೆ ನೀಡಬೇಕೆಂಬುದರ ಜೊತೆಗೆ ಮಹಿಳೆಯರ ಸಮಾನತೆಯನ್ನು ದೇಶಗಳ ಸ್ವಾತಂತ್ರ್ಯಗಳೊಂದಿಗೂ ಜೊತೆಗೂಡಿಸಲಾಯಿತು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಬಂಡವಾಳಶಾಹಿ, ಪುರುಷ ಪ್ರಧಾನ ಸಮಾಜದ ಸಂಕೋಲೆಗಳ ವಿರುದ್ಧ ಮತ್ತು ಮಹಿಳಾ ಉನ್ನತೀಕರಣದ ಸಂಕೇತವಾಗಿದೆ.

ಮಹಿಳಾ ಸಬಲೀಕರಣವು ಶಾಂತಿ ಮತ್ತು ಸಮೃದ್ಧಿಗೆ ಸಂಬಂಧಿಸಿದೆ ಎಂದು ದೃಢಪಡಿಸುವ ಜನಸಂಖ್ಯೆ ಮತ್ತು ಅಭಿವೃದ್ಧಿಯ ಕುರಿತಾದ ಅಂತರರಾಷ್ಟ್ರೀಯ ಸಮ್ಮೇಳನಕ್ಕಾಗಿ ಜಾಗತಿಕ ನಾಯಕರು ಒಟ್ಟುಗೂಡಿ ಮೂವತ್ತು ವರ್ಷಗಳ ನಂತರ, ಮಹಿಳೆಯರು ಮತ್ತು ಹುಡುಗಿಯರಿಗೆ ಧ್ವನಿ ಮತ್ತು ಆಯ್ಕೆ ಇರುವ ಸಮಾಜಗಳನ್ನು ಸೃಷ್ಟಿಸುವಲ್ಲಿ ಜಗತ್ತು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ.

ಅಂತರರಾಷ್ಟ್ರೀಯ ಮಹಿಳಾ ದಿನ (IWD) ಮಹಿಳೆಯರು ಸಾಧಿಸಿದ ಎಲ್ಲಾ ಅದ್ಭುತ ವಿಷಯಗಳನ್ನು ಆಚರಿಸುವ ವಾರ್ಷಿಕ ಕಾರ್ಯಕ್ರಮವಾಗಿದೆ. ಇದು ಮಹಿಳೆಯರು ಪ್ರಪಂಚದ ಮೇಲೆ ಹೇಗೆ ಪ್ರಭಾವ ಬೀರಿದ್ದಾರೆ ಮತ್ತು ಹೇಗೆ ಪ್ರಭಾವ ಬೀರುತ್ತಿದ್ದಾರೆ ಎಂಬುದನ್ನು ತೋರಿಸಲು ಒಂದು ಮಾರ್ಗವಾಗಿದೆ. ಮಹಿಳಾ ದಿನಾಚರಣೆಯನ್ನು ಆಚರಣೆ ಜೊತೆಗೆ, ಮಹಿಳೆಯರು ಹಿಂದೆ ಮತ್ತು ವರ್ತಮಾನದಲ್ಲಿ ಎದುರಿಸಿದ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವಂತಾಹದಾಗಿದೆ. ಐತಿಹಾಸಿಕವಾಗಿ, ಮಹಿಳೆಯ–ರಿಗೆ ಮತದಾನದ ಹಕ್ಕು, ಕೆಲಸ ಮಾಡುವ ಹಕ್ಕು, ಶಿಕ್ಷಣದ ಪ್ರವೇಶ ಮತ್ತು ಇನ್ನೂ ಹೆಚ್ಚಿನದನ್ನು ನಿರಾಕರಿಸಲಾಗಿದೆ. ಈ ನಿರ್ಬಂಧಗಳ ವಿರುದ್ಧ ಹೋರಾಡಿದ ಮಹಿಳೆಯರ ಕಾರಣದಿಂದಾಗಿ, ನಮ್ಮ ಸುತ್ತಲಿನ ಜಗತ್ತಿನಲ್ಲಿ ಮಹಿಳೆಯರು ಈಗ ಮಹಿಳಾ ದಿನಾಚರಣೆ ಏಕೆ ಎಂಬುದನ್ನು ಹೇಳಬಹುದಾಗಿದೆ. ಆದರೆ ಇಂದಿಗೂ ಮಹಿಳೆಯರು ಎದುರಿಸುತ್ತಿರುವ ಮತ್ತು ಹೋರಾಡುತ್ತಿರುವ ಅನೇಕ ಸಮಸ್ಯೆಗಳು ಇನ್ನೂ ಇವೆ. ಇಂದು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅಸಮಾನತೆಗಳು, ಲಿಂಗ ಪಕ್ಷಪಾತಗಳು, ತಾರತಮ್ಯ ಎಲ್ಲದರ ಬಗ್ಗೆ ಗಮನಹರಿಸಲು ಅಂತರರಾಷ್ಟ್ರೀಯ ಮಹಿಳಾ ದಿನವು ನಮಗೆ ಒಂದು ಪ್ರಮುಖ ದಿನವಾಗಿದೆ.

### 2025 ರ ಅಂತರರಾಷ್ಟ್ರೀಯ ಮಹಿಳಾ ದಿನ

ಮಹಿಳಾ ಹಕ್ಕುಗಳಿಗಾಗಿ ಅಭಿಯಾನ ನಡೆಸಿದ ಮಹಿಳೆಯರು ಮತ್ತು ಇಂದಿಗೂ ಹಾಗೆಯೇ ಮಾಡುತ್ತಿರುವವರ ಗೌರವಾರ್ಥವಾಗಿ ಪ್ರತಿ ವರ್ಷ ಮಾರ್ಚ್ 8 ರಂದು ಜಾಗತಿಕವಾಗಿ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಗುತ್ತದೆ.

### 2025ರ ಅಂತರರಾಷ್ಟ್ರೀಯ ಮಹಿಳಾ ದಿನದ ಥೀಮ್

2025ರ ಅಂತರರಾಷ್ಟ್ರೀಯ ಮಹಿಳಾ ದಿನದ ಥೀಮ್ ಕ್ರಿಯೆಯನ್ನು ವೇಗಗೊಳಿಸಿ Accelerate Action ಈ ಥೀಮ್ ಮಹಿಳಾ ಸಮಾನತೆಯನ್ನು ವೇಗಗೊಳಿಸುವುದರ ಮೇಲೆ ಕೇಂದ್ರೀಕರಿಸುತ್ತದೆ.

### ಅಂತರರಾಷ್ಟ್ರೀಯ ಮಹಿಳಾ ದಿನದ ಇತಿಹಾಸ

ಅಂತರರಾಷ್ಟ್ರೀಯ ಮಹಿಳಾ ದಿನದ ಇತಿಹಾಸವು 1910 ರಲ್ಲಿ ಪ್ರಾರಂಭವಾಗುತ್ತದೆ ಮತ್ತು ಇದನ್ನು ಕ್ಲಾರಾ ಜೆಟ್ಕಿನ್ ಎಂಬ ಮಹಿಳೆ ಪ್ರಸ್ತಾಪಿಸಿದರು. ಮಹಿಳೆಯರು ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಲು ಪ್ರತಿ ದೇಶದಲ್ಲೂ ಒಂದು ನಿರ್ದಿಷ್ಟ ದಿನವನ್ನು ಹೊಂದುವುದು ಮೂಲ ಗು–ರಿಯಾಗಿತ್ತು. ಈ ಗುರಿಯು ಪ್ರಪಂಚದಾದ್ಯಂತದ ಎಲ್ಲಾ ಜನರಿಗೆ ಸಮಾನತೆಯನ್ನು ಸಾಧಿಸುವ ಗುರಿಯೊಂದಿಗೆ ಮುಂದುವರೆದಿದೆ, ಇದಕ್ಕಾಗಿ ನಾವು ಇಂದಿಗೂ ಹೋರಾಡುತ್ತಿದ್ದೇವೆ. ಯುಕೆಯಲ್ಲಿ, ಹೋರಾಟವನ್ನು ಮುನ್ನಡೆಸಿದ ಮಹಿಳೆಯರ ಗುಂಪನ್ನು ಮಹಿಳಾ ಸಾಮಾಜಿಕ ಮತ್ತು ರಾಜಕೀಯ ಒಕ್ಕೂಟ ಎಂದು ಕರೆಯಲಾಗುತ್ತಿತ್ತು, ಇದನ್ನು ಸಫ್ರಾಗೆಟ್ಸ್ – Suffragettes ಎಂದೂ ಕರೆಯುತ್ತಾರೆ. ಅವರು ನೇರಳೆ, ಹಸಿರು ಮತ್ತು ಬಿಳಿ ಬಣ್ಣಗಳನ್ನು ಧರಿಸಿದ ಬಲವಾದ ಮತ್ತು ಸಕ್ರಿಯ ಮಹಿಳೆಯರ ಗುಂಪಾಗಿದ್ದರು, ಇವು ಈಗ ಅಂತರರಾಷ್ಟ್ರೀಯ ಮಹಿಳಾ ದಿನದೊಂದಿಗೆ

25ನೇ ಪುಟಕ್ಕೆ.....

# ಸೇವೆ ಮತ್ತು ಸಮರ್ಪಣೆಯ ಮಾದರಿ ಮಹಿಳೆ : ಪದ್ಮಶ್ರೀ ಡಾ. ವಿಜಯಲಕ್ಷ್ಮೀ ದೇಶಮಾನೆ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಪ್ರಾಂತೀಯ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತ



ಐದು ಅಡಿ ಎತ್ತರದ ಕೃಷ್ಣ ವರ್ಣದ ದುಂಡು ಮುಖ, ಹಣೆಯ ಮೇಲೆ ದೊಡ್ಡದಾದ ಕುಂಕುಮ ಸಾಧರಣ ಸೀರೆಯ ಉಡುಗೆ ತೊಡುಗೆ ನೋಡಿದರೆ ಹಳ್ಳಿಯಲ್ಲಿ ವಾಸಿಸುವ ತಾಯಂದಿರ ಹಾಗೆ ಕಾಣಿಸುವ ತಾಯಿ ಪದ್ಮಶ್ರೀ ಡಾಕ್ಟರ್ ವಿಜಯಲಕ್ಷ್ಮೀ ದೇಶಮಾನೆ.

**ಹಿನ್ನಲೆ :**

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಕೋಬಾಳ ಗ್ರಾಮದ ಅನಕ್ಷರಸ್ಥ ಚಮ್ಮಾರ, ಕೂಲಿ ಹಾಗೂ ಕಟ್ಟಿಗೆ ಒಡೆಯುವ ಕಾಯಕದಲ್ಲಿ ತೊಡಗಿದ ಬಾಬುರಾವ ದೇಶಮಾನೆ ಔಪಚಾರಿಕವಾಗಿ ಶಿಕ್ಷಣ ಕಲಿಯದಿದ್ದರು ಸಹ ಸ್ವಾತಂತ್ರ ಚಳುವಳಿಯಿಂದ ಪ್ರಭಾವಿತರಾಗಿ ಅನೋಪಚಾರಿಕವಾಗಿ ಕನ್ನಡ, ಮರಾಠಿ, ಹಿಂದಿ ಇಂಗ್ಲೀಷ ಅಕ್ಷರ ಕಲಿತರು. ನಂತರ ಗ್ರಾಮದ ಹತ್ತಿರದ ದೊಡ್ಡ ನಗರ ಕಲಬುರಗಿಯ ಎಮ್‌ಎಸ್‌ಕೆ ಮಿಲ್‌ನಲ್ಲಿ ನೌಕರಿಗೆ ಸೇರ್ಪಡೆಯೊಂದಿಗೆ ಹೆಂಡತಿ ರತ್ನಮ್ಮರೊಂದಿಗೆ ಜೀವನ ಸಾಗಿಸುತಿದ್ದರು. ಸನ್ 1955ರಲ್ಲಿ ರತ್ನಮ್ಮ, ಬಾಬುರಾವ ದೇಶಮಾನೆ ಕುಟುಂಬದಲ್ಲಿ ಹೆಣ್ಣು ಮಗುವಿನ ಜನನದಿಂದ ಕುಟುಂಬದಲ್ಲಿ ಸಂತೋಷ ಒಂದುಕಡೆ ಆದರೆ ಕುಟುಂಬ ನಿರ್ವಹಣೆಯ ಚಿಂತೆ ಇನ್ನೊಂದು ಕಡೆ, ಸಂತೋಷದಿಂದ ಹಿರಿಯ ಮಗಳನ್ನು ಪಂಡಿತ್ ನೆಹರು ಅವರ ಸಹೋದರಿ ಮತ್ತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷರಾದ ಮೊದಲ ಮಹಿಳೆ ವಿಜಯಲಕ್ಷ್ಮೀ ಪಂಡಿತ್ ಅವರ ಹೆಸರನ್ನು ಇಡಲಾಯಿತು.

ವಿಜಯಲಕ್ಷ್ಮೀ ಎಂದು ನಾಮಕರಣ ಮಾಡಲಾಯಿತು. ಆದರೆ ಕುಟುಂಬ ನಿರ್ವಹಣೆ ಮಾಡುವಷ್ಟುಲಕ್ಷ್ಮೀ ಇರಲಿಲ್ಲ. ವಿಜಯಲಕ್ಷ್ಮೀರವರಿಗೆ ಒಬ್ಬ ಸಹೊದರ, 6 ಸಹೋದರಿಯರು ಸೇರಿದಂತೆ ಒಟ್ಟು 10 ಜನರು ಹೊಂದಿರುವ ದೊಡ್ಡ ಕುಟುಂಬ. ಬಾಬುರಾವ ಸಹೋದರಿಗೆ ಸೇರಿದ ಕೊಳೆಗೇರಿ ಮನೆಯಲ್ಲಿ ವಾಸ.

ಕುಟುಂಬ ನಡೆಸುವುದು ಕಷ್ಟಕರವಾಗಿತ್ತು. ಬಡತನವನ್ನು ನೀಗಿಸಲು ತಾಯಿ ರತ್ನಮ್ಮ ತರಕಾರಿಗಳನ್ನು ಮಾರಾಟ ಮಾಡುವ ಮೂಲಕ ಕುಟುಂಬವನ್ನು ಪೋಷಿಸಿದರು. ಮನೆ ಮನೆಗೆ ತೆರಳಿ ದಿನಚರಿಯನ್ನು ಪ್ರಾರಂಭಿಸಿದರು ಮತ್ತು ನಂತರ ಕಲಬುರಗಿ ನಗರದ ಗಾಜಿಪುರ ಪ್ರದೇಶದಲ್ಲಿ ಅಂಗಡಿಯನ್ನು ಸ್ಥಾಪಿಸಿದರು. ಅವರು ತರಕಾರಿಗಳನ್ನು ಸಗಟಾಗಿ ಖರೀದಿಸಿ ದೈನಂದಿನ ಜೀವನವನ್ನು ನಡೆಸಲು ಪ್ರಯತ್ನಿಸುತ್ತಿದ್ದರು. ವಿಜಯಲಕ್ಷ್ಮೀ ಮತ್ತು ಸಹೋದರ ತರಕಾರಿಗಳ ಗಂಟುಗಳನ್ನು ತಮ್ಮ ತಲೆಯ ಮೇಲೆ ಹೊತ್ತುಕೊಳ್ಳುತ್ತ ತಾಯಿಗೆ ಸಹಾಯ ಮಾಡುತಿದ್ದರು.

**ಶಿಕ್ಷಣ :**

ವಿಜಯಲಕ್ಷ್ಮೀ ದೇಶಮಾನೆ ಅವರ ಆರಂಭಿಕ ಶಿಕ್ಷಣವು ಗಾಜಿಪುರದ ಚಕ್ಕರಕಟ್ಟ ಶಾಲೆಯಲ್ಲಿ ಪ್ರಾರಂಭವಾಯಿತು. ಅಲ್ಲಿ ಅವರು ಏಳನೇ ತರಗತಿಯವರೆಗೆ ಅಧ್ಯಯನ ಮಾಡಿದರು. ನಂತರ ಅವರ ಪ್ರೌಢಶಾಲಾ ಶಿಕ್ಷಣವನ್ನು ಗಂಗಾಂಬಿಕಾ ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಪಡೆದರು. ನಂತರ ಅವರು ನಗರದ ಎಸ.ಬಿ. ವಸತಿ ಶಾಲೆಯಲ್ಲಿ ಪಿಯುಸಿಯಲ್ಲಿ ಉತ್ತಮ ಅಂಕದೊಂದಿಗೆ ಉತ್ತೀರ್ಣರಾದರು. ತಂದೆ ಎಂ–ಎಸ್‌ಕೆ ಮಿಲನಲ್ಲಿ ಕಾರ್ಮಿಕರಾಗಿದ್ದರಿಂದ ಅವರು ಅನಾರೋಗ್ಯಕ್ಕೆ ಒಳಗಾದಾಗಲೆಲ್ಲಾ ಇಎಸ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆ ಸಂದರ್ಭದಲ್ಲಿ ಆಸ್ಪತ್ರೆಗೆ ವಿಜಯಲಕ್ಷ್ಮೀ ಹೋಗುತ್ತಿದ್ದರಿಂದ ತಂದೆಯವರು ನೀನು ಶಸ್ತ್ರ ಚಿಕಿತ್ಸಕಳಾಗಬೇಕು ಎಂದು ಪದೇ ಪದೇ ಹೇಳುವುದರ ಮುಖಾಂತರ ಅವರಲ್ಲಿ ಕನಸನ್ನು ತುಂಬಿದರು. ಅದರ ಫಲವಾಗಿ ಪಿಯುಸಿ ನಂತರ 1980ರಲ್ಲಿ ಕೆಎಮ್‌ಸಿ ವೈದ್ಯಕೀಯ ಕಾಲೇಜನಲ್ಲಿ ಪ್ರವೇಶ ಪಡೆದಳು. ಈ ಸಂದರ್ಭದಲ್ಲಿ ಕುಟುಂಬದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿದ್ದರಿಂದ ಶುಲ್ಕ ಪಾವತಿಸಲು ತಾಯಿ ತನ್ನ ಮಂಗಳ ಸೂತ್ರವನ್ನು ಮಾರಿ ಶುಲ್ಕ ಪಾವತಿಸಿದ್ದರಿಂದ ವಿಜಯಲಕ್ಷ್ಮೀ ದೇಶಮಾನೆ ಹುಬ್ಬಳಿಯ ಕೆಎಂಸಿಯಿಂದ ಎಂಬಿಬಿಎಸ್ ಪದವಿ ಪಡೆದು ಡಾಕ್ಟರ ಆದರು ಸಹ ತಮ್ಮ ತಂದೆಯ ಆಸೆಯಂತೆ ಶಸ್ತ್ರ ಚಿಕಿತ್ಸಕಳಾಗಬೇಕು ಎಂಬ ಹಂಬಲದಿಂದ 1984ರಲ್ಲಿ ಬಳ್ಳಾರಿ ವೈದ್ಯಕೀಯ ಕಾಲೇಜಿನಿಂದ ಎಂಎಸ್ ಪದವಿ ಪಡೆದರು.

**ವೃತಿ ಜೀವನ :**

ಸ್ನಾತಕೋತ್ತರ ಅಧ್ಯಯನವನ್ನು ಮುಗಿಸಿದ ತಕ್ಷಣ 1984ರಲ್ಲಿ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಿವಾಸಿ ವೈದ್ಯೆಯಾಗಿ ಸೇರಿದರು. ಸನ್ 1994ರಲ್ಲಿ, ಸಂಸ್ಥೆಯಲ್ಲಿ ಮೊದಲ ಮಹಿಳಾ ಪ್ರಾಧ್ಯಾಪಕರಾದರು. ನಂತರ ಕಿದ್ವಾಯ್ ಸ್ಮಾರಕ ಆಂಕೊಲಾಜಿ ಸಂಸ್ಥೆಯಲ್ಲಿ ಡೀನ್, ವಿಭಾಗದ ಮುಖ್ಯಸ್ಥರು ಮತ್ತು ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ನಿರ್ದೇಶಕರಾಗಿ ಕಾರ್ಯಭಾರ ವಹಿಸಿದ ಆರು ತಿಂಗಳಲ್ಲಿ 300 ಹಾಸಿಗೆ ಆಸ್ಪತ್ರೆಯನ್ನು 600 ಹಾಸಿಗೆಗೆ ವಿಸ್ತರಿಸಿದರು. ಬಂದಿರುವ ಎಲ್ಲ ರೊಗಿಗಗಳ ಕುಂದು ಕೊರತೆಗಳನ್ನು ಆಲಿಸಿ ಆದಷ್ಟು ಉತ್ತಮ ಮಟ್ಟದಲ್ಲಿ ಸೇವೆ ನೀಡುವುದರ ಮುಖಾಂತರ ಕಿದ್ವಾಯಿ ಆಸ್ಪತ್ರೆ ಖಾಸಗಿ ಆಸ್ಪತ್ರೆಗಿಂತ ಹೆಚ್ಚಿನ ಗುಣಮಟ್ಟದ ಸೇವೆಗೆ ಹೆಸರು ವಾಸಿಯಾಗುವಂತೆ ಮಾಡಿದರು. 2015ರಲ್ಲಿ ನಿವೃತ್ತಿ ಹೊಂದುವರೆಗೂ ಸಹ ವೈದ್ಯೋ ನಾರಾಯಣೋ ಹರಿಯಂತೆ ಜನ ಸೇವೆಯೇ ಜನಾರ್ಧನ ಸೇವೆ ಎಂದು ಭಾವಿಸಿ ಮದುವೆಯಾದರೆ ಪೂರ್ಣ ಸೇವೆ ಮಾಡಲು ಅಡ್ಡಿಯಾಗಬಹುದು ಎಂದು ಅವಿವಾಹಿತರಾಗಿ ಸಾರ್ಥಕ ಬದುಕನ್ನು ಸವಿಸುತಿದ್ದಾರೆ.

ನಿವೃತ್ತಿಯಾದ ನಂತರ ಸಹ ವೃತಿಗೆ ವಿರಾಮ ನೀಡಿದರು. ಸಮಾಜದ ಚಿಕಿತ್ಸಕರಾಗಿ ಸಾರ್ವಜನಿಕರಲ್ಲಿ ಸ್ತನ ಕ್ಯಾನ್ಸರ್ ಜಾಗೃತಿ ಮೂಡಿಸುವ ಮೂಲಕ ಮತ್ತು ಬೆಂಗಳೂರಿನಲ್ಲಿರುವ ಆಶ್ರಯ ತಾಣವಾದ ಅಬಲಾಶ್ರಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಮೂಲಕ ಸಾರ್ವಜನಿಕ ಸೇವೆಗೆ ಸಮರ್ಪಿತರಾಗಿದ್ದರು. ಹಲವಾರು ಸಾಮಾಜಿಕ ಅಭಿಯಾನಗಳು, ಸಂಪರ್ಕಗಳು, ಜಾಗೃತಿ ಶಿಬಿರಗಳು, ಸಂಶೋಧನಾ ಕಾರ್ಯಗಳು ಮತ್ತು ಹಳ್ಳಿಗಳಲ್ಲಿನ ಶಿಕ್ಷಣ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ತಿಂಗಳಲ್ಲಿ 15 ದಿನಗಳನ್ನು ಸಮಾಜದ ಚಟುವಟಿಕೆಗಳಿಗೆ ಮೀಸಲಿಡುತ್ತ ಉಳಿದ ದಿನಗಳಲ್ಲಿ ಕರ್ನಾಟಕ ಕ್ಯಾನ್ಸರ್ ಸೊಸೈಟಿಯಲ್ಲಿ ಲಭ್ಯವಿದ್ದು ಉಚಿತ ಸೇವೆ ಒದಗಿಸುತ್ತ, ವಿಶ್ವಹಿಂದೂ ಪರಿಷತ್‌ನ ದಕ್ಷಿಣ ಪ್ರಾಂತ ಅಧ್ಯಕ್ಷರಾಗಿ ರಾಜ್ಯಾದ್ಯಂತ ಪ್ರವಾಸ ಮಾಡುವುದರ ಮುಖಾಂತರ ತಮ್ಮ ಜೀವನವನ್ನು ಸೇವೆ ಮತ್ತು ಸಮಾರ್ಪಣೆಗೆ ಮೀಸಲು ಇಡುವುದರ ಮುಖಾಂತರ ನಮ್ಮೆಲ್ಲರಿಗೂ ಪದ್ಮಶ್ರೀ ಡಾ. ವಿಜಯಲಕ್ಷ್ಮೀ ದೇಶಮಾನೆರವರು ಮಾದರಿ ಹೆಣ್ಣು ಆಗುವುದರಲ್ಲಿ ಸಂಶಯವಿಲ್ಲ. ಇಂತಹವರ ಆದರ್ಶಗಳನ್ನು ನಾವೆಲ್ಲ ಅಳವಡಿಸಿಕೊಂಡಾಗ ಮಾತ್ರ ಮಹಿಳಾ ದಿನಾಚರಣೆಗೆ ಸಾರ್ಥಕತೆ ಹಾಗೂ ಅದಕ್ಕೆ ಒಂದು ಅರ್ಥ ಬರುವುದು.

**ಪ್ರಶಸ್ತಿಗಳು :**

- 1998ರಲ್ಲಿ ಕಲಾಶ್ ಪ್ರಶಸ್ತಿ.
- 2004ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.
- 2004ರಲ್ಲಿ ರಾಷ್ಟ್ರೀಯ ರತ್ನನ್ ಪ್ರಶಸ್ತಿ.
- 2005ರಲ್ಲಿ ಮಹಿಳಾ ಶಿರೋಮಣಿ ಪ್ರಶಸ್ತಿ.
- 2025ರಲ್ಲಿ ಪದ್ಮಶ್ರೀ ಪ್ರಶಸ್ತಿ.

---

.....23ನೇ ಪುಟದಿಂದ

ಸಂಬಂಧ ಹೊಂದಿವೆ. ಸಫ್ರಾಗೆಟ್ಸ್ ಮಹಿಳೆಯರ ಮತದಾನದ ಹಕ್ಕಿಗಾಗಿ ಅಭಿಯಾನವನ್ನು ಪ್ರಾರಂಭಿಸಿದರು, ಪ್ರಮುಖ ವಿಷಯಗಳ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರು ತಮ್ಮ ಅಭಿಪ್ರಾಯವನ್ನು ಹೊಂದಿರಬೇಕು ಎಂದು ನಂಬಿದ್ದರು. ಯುಕೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವು ಹೆಚ್ಚಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡಿದ ಮಹಿಳೆಯರ ಮೇಲೆ ಕೇಂದ್ರೀಕರಿಸಿ ಈ ಆಚರಣೆ ಮಾಡಲಾಗುತ್ತದೆ.

ಸಮಾಜ, ಆರ್ಥಿಕತೆ, ರಾಜಕೀಯ ಮತ್ತು ಸಂಸ್ಕೃತಿಯಲ್ಲಿನ ಯಶಸ್ಸುಗಳು ಸೇರಿದಂತೆ ಪ್ರಪಂಚದಾದ್ಯಂತ ಮಹಿಳೆಯರು ಸಾಧಿಸಿರುವ ವಿವಿಧ ಸಾಧನೆಗಳನ್ನು ಗೌರವಿಸಲು ಮತ್ತು ಪ್ರಶಂಸಿಸಲು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುವುದು ಬಹಳ ಮುಖ್ಯ. ಆರೋಗ್ಯ ಮತ್ತು ಶಿಕ್ಷಣದಂತಹ ಮೂಲಭೂತ ಹಕ್ಕುಗಳು ಪ್ರಪಂಚದಾದ್ಯಂತದ ಕೆಲವು ಮಹಿಳೆಯರಿಗೆ ಇನ್ನೂ ಅಗತ್ಯವೆಂದು ಗುರುತಿಸಲ್ಪಟ್ಟಿಲ್ಲವಾದ್ದರಿಂದ, ಕೇಳಿಸಿಕೊಳ್ಳದೇ ಇರುವವರನ್ನು ಮತ್ತು ದೈನಂದಿನ ಸಂಪನ್ಮೂಲಗಳಿಂದ ತಡೆಯಲ್ಪಡುವವರನ್ನು ನೆನಪಿಸಿಕೊಳ್ಳುವ ಸಮಯ ಇದು. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬರಹಗಾರರಿಂದ ಹಿಡಿದು ಕಾರ್ಯಕರ್ತರು ಮತ್ತು ರಾಜಕಾರಣಿಗಳವರೆಗೆ ಹಲವಾರು ಪ್ರತಿಭಾನ್ವಿತ ಮಹಿಳೆಯರಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗೆ ವಿವಿಧ ದೇಶಗಳು ತಮ್ಮದೇ ಆದ ವಿಶೇಷ ಸಂಪ್ರದಾಯಗಳನ್ನು ಹೊಂದಿವೆ. ಇಟಲಿಯಲ್ಲಿ, ಮಹಿಳೆಯರು ಮತ್ತು ಹುಡುಗಿಯರು ಪರಸ್ಪರ ಮಿಮೋಸಾ ಹೂವುಗಳನ್ನು ಉಡುಗೊರೆಯಾಗಿ ನೀಡುತ್ತಾರೆ. ಅಂತರರಾಷ್ಟ್ರೀಯ ಮಹಿಳಾ ದಿನವನ್ನು ನೂರು ವರ್ಷಗಳಿಂದ ಆಚರಿಸಲಾಗುತ್ತಿದೆ.

ಅಂತರರಾಷ್ಟ್ರೀಯ ಮಹಿಳಾ ದಿನದಂದು, ನಾವು ಪ್ರಪಂಚದಾದ್ಯಂತ ಮಹಿಳೆಯರು ಸೇರಿ ಆಚರಿಸುತ್ತೇವೆ ಮತ್ತು ಸಮಾನತೆಗಾಗಿ ಹೋರಾಟದಲ್ಲಿ ಅವರು ಸಾಧಿಸಿದ್ದನ್ನೆಲ್ಲಾ ಶ್ಲಾಘಿಸುತ್ತೇವೆ. ಮಹಿಳೆಯರು ಹೆಚ್ಚಿನ ಲಾಭಗಳನ್ನು ಗಳಿಸಿದ್ದಾರೆ – ಅಡೆತಡೆಗಳನ್ನು ನಾಶಮಾಡುವುದು, ಹೆಚ್ಚು ನ್ಯಾಯಯುತ ಮತ್ತು ಸಮಾನ ಪ್ರಪಂಚದತ್ತ ಪ್ರಗತಿಯನ್ನು ತೆಗೆದುಕೊಳ್ಳುವುದು. ಕೋಟ್ಯಂತರ ಮಹಿಳೆಯರು ಅಂಚಿನಲ್ಲಿದ್ದು ಅನ್ಯಾಯ ಮತ್ತು ತಾರತಮ್ಯವನ್ನು ಎದುರಿಸುತ್ತಿದ್ದಾರೆ, ಆದರೆ ಮಹಿಳೆಯರ ಮೇಲಿನ ನಿರಂತರ ಹಿಂಸಾಚಾರದ ಸಾಂಕ್ರಾಮಿಕ ರೋಗವು ಮಾನವೀಯತೆಯನ್ನು ಅವಮಾನಿಸುತ್ತದೆ. ನಮ್ಮ ಜಗತ್ತು ಇನ್ನೂ ಪುರುಷ ಪ್ರಾಬಲ್ಯದ ಅಧಿಕಾರ ಸಂಬಂಧಗಳ ಸಹಸ್ರಮಾನಗಳನ್ನು ಪ್ರತಿಬಿಂಬಿಸುತ್ತದೆ ಮತ್ತು ಪ್ರಗತಿಯು ದಾಳಿಗೆ ಒಳಗಾಗುತ್ತಿದೆ, ಮಹಿಳಾ ಹಕ್ಕುಗಳ ವಿರುದ್ಧ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ನಮ್ಮ ಈಗಿನ ದರದಲ್ಲಿ, ಕಾನೂನು ಸಮಾನತೆ ಸುಮಾರು ಮುನ್ನೂರು ವರ್ಷಗಳಷ್ಟು ದೂರದಲ್ಲಿದೆ. ನಾವು ಹೆಚ್ಚು ವೇಗವಾಗಿ ಚಲಿಸಬೇಕು. ಅಂತರರಾಷ್ಟ್ರೀಯ ಮಹಿಳಾ ದಿನದಂದು, ನಾವು ತಮ್ಮ ಹಕ್ಕುಗಳಿಗಾಗಿ ಹೋರಾಡುವ ಮಹಿಳೆಯರು ಮತ್ತು ಹುಡುಗಿಯರೊಂದಿಗೆ ನಿಲ್ಲುವುದು ಮತ್ತು ಪ್ರಗತಿಯನ್ನು ವೇಗಗೊಳಿಸಲು ನಾವು ಬದ್ಧರಾಗುವುದು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯವನ್ನು ಕೊನೆಗೊಳಿಸಲು ಮತ್ತು ಆರ್ಥಿಕತೆ, ಡಿಜಿಟಲ್ ತಂತ್ರಜ್ಞಾನಗಳು, ಶಾಂತಿ ನಿರ್ಮಾಣ ಮತ್ತು ಪ್ರಸ್ತುತ ವಾತಾವರಣ ಕ್ರಿಯೆಯಲ್ಲಿ ಮಹಿಳೆಯರ ಸೇರ್ಪಡೆ ಮತ್ತು ನಾಯಕತ್ವವನ್ನು ಹೆಚ್ಚಿಸಲು ನಾವು ಕಾರ್ಯಕ್ರಮಗಳಲ್ಲಿ ಹೂಡಿಕೆ ಮಾಡಬೇಕು. ವ್ಯಾಪಾರ, ಹಣಕಾಸು, ಕೇಂದ್ರ ಬ್ಯಾಂಕುಗಳು ಮತ್ತು ಹಣಕಾಸು ಸಚಿವಾಲಯಗಳಲ್ಲಿ ಮಹಿಳಾ ನಾಯಕಿಯರ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ. ಇದು ಮಹಿಳೆಯರು ಮತ್ತು ಹುಡುಗಿಯರ ಅಗತ್ಯಗಳಿಗೆ ಸ್ಪಂದಿಸುವ ನೀತಿಗಳು ಮತ್ತು ಕಾರ್ಯಕ್ರಮಗಳಲ್ಲಿ ಹೂಡಿಕೆಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಮಹಿಳಾ ಹಕ್ಕುಗಳು ನ್ಯಾಯಯುತ, ಶಾಂತಿಯುತ, ಸಮೃದ್ಧ ಸಮಾಜಗಳಿಗೆ ಸಾಬೀತಾದ ಮಾರ್ಗವಾಗಿದೆ. ಅದು ನಮಗೆಲ್ಲರಿಗೂ ಒಳ್ಳೆಯದು.

ಹೆಣ್ಣು ಅವಳೊಂದು "ಮಹಾಶಕ್ತಿ" ಮಹಿಳೆ ಸಮಾಜದಲ್ಲಿ ಬಹುಮಾನಾರ್ಹ ಹಾಗೂ ಶಕ್ತಿಯುಳ್ಳ ವ್ಯಕ್ತಿತ್ವ, ಅವಳಿಗೆ ಗೌರವ ನೀಡುವುದು ಮಾನವೀಯತೆ, ಸಮಾನತೆ ಮತ್ತು ಸಾಮಾಜಿಕ ಶಕ್ತಿಯ ಪ್ರತೀಕವಾಗಿದೆ. ಮಹಿಳೆ ಗೌರವ ನೀಡುವುದು ನಾವು ಅವಳ ಶಕ್ತಿಯನ್ನೂ, ಅವಳನ್ನು ಒಳಗೊಂಡಿರುವ ಅನೇಕ ಪಾತ್ರಗಳನ್ನು ಸ್ವೀಕರಿಸುವುದನ್ನು ಪ್ರತಿಬಿಂಬಿಸುತ್ತದೆ. ಅವಳು ಪೋಷಕ, ಕೆಲಸಕೇಂದ್ರಿತ, ಶಿಕ್ಷಣದ ಮುಖಾಂತರ ಮಾರ್ಗದರ್ಶಕ ಹಾಗೂ ಸಮಾಜವನ್ನು ಬೆಳಗಿಸುವ & ಒದಗಿಸುವ ವ್ಯಕ್ತಿತ್ವವಾಗಿದೆ. ಮಹಿಳೆಯರಲ್ಲಿ ಗೌರವವು ನಿತ್ಯದ ಜೀವನದಲ್ಲಿ ಮಹತ್ವಪೂರ್ಣವಾಗಿದೆ. ಅವಳ ಮಾತು, ಆಲೋಚನೆ ಹಾಗೂ ನಿರ್ಧಾರಗಳನ್ನು ಹಿರಿದುಕೊಂಡು, ಅವಳ ದಕ್ಷಿಣೆ, ಸಮಾನತೆ ಮತ್ತು ಮೌಲ್ಯಗಳನ್ನು ಗೌರವಿಸುವುದು ನಮ್ಮ ಜವಾಬ್ದಾರಿಯಾಗಿದೆ. ಅನೇಕ ಸಂದರ್ಭಗಳಲ್ಲಿ ಅವಳ ಹಕ್ಕುಗಳನ್ನು, ಸ್ವಾತಂತ್ರ್ಯ ಮತ್ತು ಗೌರವವನ್ನು ಕಾಪಾಡುವುದು ನಮ್ಮ ಕೆಲಸ.

ತೊಟ್ಟಿಲ ತೂಗಿದಾಕೆಗೆ ಬೇರೆ ಹೆಸರು ಬೇಕೆ ಸ್ತ್ರೀ ಅಂದರೆ ಅಷ್ಟೆ ಸಾಕೆ? ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಷಯಗಳು

# ಯುಗಾದಿ : ನೋವು ನೀಗುವ ನಲಿವು ಸಂಭ್ರಮಿಸುವ ಹಬ್ಬ

– ಶ್ರೀ ಶಿವಕುಮಾರ ಬಿರಾದರ, ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.



ಜೀವನದಲ್ಲಿ ಸಿಹಿ–ಕಹಿ – ಎರಡೂ ಸಹಜ; ಹೀಗಾಗಿ ಎರಡನ್ನೂ ಸಮಾನವಾಗಿ, ಸಮಚಿತ್ತದಿಂದ ಸ್ವೀಕರಿಸಬೇಕು ಎಂಬುದೇ ಯುಗಾದಿಯ ಸಂದೇಶ. ಬದಲಾವಣೆಯು ಸೃಷ್ಟಿಯ ನಿರಂತರ ನಿಯಮ; ಎಲೆಯೊಂದು ಚಿಗುರುವುದು, ಕೊಂಬೆಯಲ್ಲಿ ಹೂವೊಂದು ಕೊನರುವುದು, ಹೂವಾಗಿರುವುದು ಕಾಯಾಗುವುದು, ಕಾಯಿ ಹಣ್ಣಾಗುವುದು, ಹಣ್ಣು ಮಣ್ಣು ಸೇರುವುದು, ನಳನಳಿಸುತ್ತಿದ್ದ ಮರ ಬೋಳಾಗುವುದು, ಮಣ್ಣಿನಲ್ಲಿ ಸೇರಿದ ಜೀವರಸದಿಂದ ಮತ್ತೆ ಆ ಮರ ಚಿಗುರುವುದು, ಹೂವಾಗಿ ಅರಳುವುದು, ಹೂವು ಕಾಯಾಗುವುದು... ಇದು ನಿಸರ್ಗದ ನಿತ್ಯನಿಯಮ. ಯುಗಾದಿಯ ಸಂದೇಶವೂ ಇದೇ ಹೌದು. ಬರ, ಧಗೆ, ಹಗೆ – ಇವೆಲ್ಲವೂ ಬದಲಾವಣೆಯನ್ನು ಕಾಣಲೇಬೇಕು; ಒಣಗಿದ ಮರದಲ್ಲಿ ಚಿಗುರು ಮೂಡುವಂತೆ ಆತಂಕದ ಮನದಲ್ಲಿ ನೆಮ್ಮದಿಯೂ ಮೂಡಲೇಬೇಕು. ಇದೇ ಜೀವನಚಕ್ರ. ಇಂಥ ಭರವಸೆಯನ್ನು ಪ್ರಕೃತಿಯು ಪ್ರತಿ ಕ್ಷಣವೂ ಕೊಡುತ್ತಲೇ ಇರುತ್ತದೆ. ಇದರ ಸಾಂಕೇತಿಕತೆಯನ್ನೇ ಯುಗಾದಿಯ ಹಬ್ಬದಲ್ಲಿ ನಾವು ಕಾಣುವುದು, ಕಾಣಬೇಕಾದದ್ದು ಕೂಡ.

ಚೈತ್ರಮಾಸದ ಮೊದಲನೆಯ ದಿನ, ಶುಕ್ಲ ಪ್ರತಿಪದೆಯಂದು ಯುಗಾದಿಯನ್ನಾಗಿ ಆಚರಿಸಲಾಗುತ್ತದೆ. ಈ ದಿನ ಬ್ರಹ್ಮನು ಇಡಿಯ ಜಗತ್ತನ್ನು ಸೃಷ್ಟಿಸಿದ ಎಂಬುದು ನಮ್ಮ ನಂಬಿಕೆ. ಇಂಥ ಒಕ್ಕಣೆಯನ್ನು ನಾವು ಪುರಾಣಗಳಲ್ಲಿ ಕಾಣುತ್ತೇವೆ. ಬ್ರಹ್ಮಪುರಾಣದಲ್ಲಿ ಇಂಥದೊಂದು ಮಾತನ್ನು ಕಾಣಬಹುದು. ಚೈತ್ರಮಾಸದ ಶುಕ್ಲಪಕ್ಷದ ಮೊದಲನೆಯ ದಿನ ಸೂರ್ಯೋದಯದೊಡನೆ ಬ್ರಹ್ಮನು ಸಂಪೂರ್ಣ ಜಗತ್ತನ್ನು ಸೃಷ್ಟಿಸಿದನು ಎಂದು ಬರೆಯಲಾಗಿದೆ.

ಸೃಷ್ಟಿ ಎಂದರೆ ಕಾಲದ ಆರಂಭವೂ ಹೌದು. ಕಾಲದಲ್ಲಿಯೇ ನಮ್ಮ ಪ್ರಪಂಚ ಹರಡಿರುವುದು; ನಮ್ಮ ಜೀವನವೂ ಹರಡಿರುವುದು. ಹೀಗಾಗಿ ಕಾಲಕ್ಕೂ ನಮಗೂ ನೇರ ನಂಟು. ಕಾಲದ ವ್ಯಾಪ್ತಿಯಲ್ಲಿಯೇ ಸೃಷ್ಟಿ–ಪ್ರಳಯ, ಹಗಲು–ಇರುಳು, ಕತ್ತಲು–ಬೆಳಕು, ಹುಟ್ಟು–ಸಾವುಗಳು ಇರುವಂಥದ್ದು. ಇವೇ ನಮ್ಮ ಸುಖ–ದುಃಖಗಳೂ ನೋವು ನಲಿವುಗಳೂ. ಇವು ನಿರಂತರವಾಗಿ ಸುತ್ತುತ್ತಲೇ ಇರುತ್ತವೆ. ಸೃಷ್ಟಿಯಾಗಿರುವ ವಿಶ್ವ ಅದು ಒಂದು ದಿನ ಪ್ರಳಯವಾಗಲೇ ಬೇಕು; ಪ್ರಳಯವಾದದ್ದು ಮತ್ತೆ ಕಾಣಿಸಿಕೊಳ್ಳುತ್ತದೆ ಕೂಡ. ಈ ಸತ್ಯ ನಮ್ಮಲ್ಲಿ ಗಟ್ಟಿಯಾಗಿ ಮನೆಮಾಡಿದಾಗ ಜೀವನವೂ ನಿತ್ಯವೂ ವಸಂತವಾಗಬಹುದು, ಚೈತ್ರಮಾಸದಂತೆ ನಮ್ಮ ಪ್ರಕೃತಿಯೂ ನಳನಳಿಸಬಹುದು ಎಂಬ ಧ್ವನಿ ಯುಗಾದಿಯ ಆಚರಣೆಯಲ್ಲಿದೆ.

"ಗಿಡವಾಗಿ ಬಗ್ಗದ್ದು ಮರವಾಗಿ ಬಗೀತೆ" – ಎಂಬ ಮಾತೊಂದಿದೆ. ನಾವು ಯಾವುದನ್ನಾದರೂ ಹೆಚ್ಚಿನ ಕಾಲ ಪಡೆಯಲು ಉದ್ದೇಶಿಸಿದ್ದಾದರೆ, ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಬಹಳ ಬೇಗ, ಸರಿಯಾದ ಸಮಯದಲ್ಲಿ ಆರಂಭಿಸಬೇಕು ಎಂಬುದು ಈ ಮಾತಿನ ತಾತ್ಪರ್ಯ. ನಾವು ವರ್ಷ ಪೂರ್ತಿ ಸಂತೋಷವಾಗಿರಬೇಕು ಎಂದರೆ ವರ್ಷದ ಆರಂಭದಲ್ಲಿ ಇದಕ್ಕೆ ಪ್ರಯತ್ನಗಳೂ ಆರಂಭವಾಗಬೇಕಷ್ಟೆ. ಹೀಗೆ ಇಡೀ ವರ್ಷ ನಮ್ಮ ಪಾಲಿಗೆ ಹಬ್ಬವಾಗಬೇಕಾದರೆ ವರ್ಷದ ಮೊದಲನೆಯ ದಿನವೇ ಹಬ್ಬವಾಗಬೇಕು. ಈ ಹಬ್ಬವಾದರೂ ಕೇವಲ ಮೈಮರೆತು ಕುಣಿದು ಕುಪ್ಪಳಿಸುವುದಕ್ಕೆ ಸೀಮಿತವಾದುದಲ್ಲ, ಜೀವನದ ಗಹನ ಸತ್ಯವನ್ನು ಮೈಗೂಡಿಸಿಕೊಳ್ಳುವ ಸಂಕಲ್ಪವಾಗತಕ್ಕದ್ದು. ಇದನ್ನೇ ನಾವು ಯುಗಾದಿಯ ಆಚರಣೆಯಲ್ಲಿ ಕಾಣುವುದು. ಜೀವನದಲ್ಲಿ ಸೋಲು–ಗೆಲುವು, ಕಷ್ಟ–ಸುಖ, ಸಿಹಿ–ಕಹಿ ಅನಿವಾರ್ಯ. ಆದರೆ ಯಾವುದು ಎದುರಾದರೂ ಅದನ್ನು ಧೈರ್ಯದಿಂದ, ಸಮಾಧಾನದಿಂದ, ಸಂತೋಷದಿಂದ, ವಿವೇಕದಿಂದ ಎದುರಿಸಬೇಕು. ಆಗ ಜೀವನವೇ ಹಬ್ಬವಾಗುತ್ತದೆ, ಸಂತೋಷದ ಚಿಲುಮೆಯಾಗುತ್ತದೆ. ಇದೇ ಯುಗಾದಿ; ಎಂದರೆ, ಇದೇ ನಮ್ಮ ಯುಗದ ಆದಿಯಾಗಬೇಕು; ಜೀವನದ ಮೊದಲ ಕ್ಷಣವಾಗಬೇಕು. ಯುಗಾದಿಯ ದಿನ ಭವಿಷ್ಯವನ್ನು ಕೇಳುವುದಾದರೂ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಅವಕಾಶ ನಮ್ಮಲ್ಲಿ ಇದೆ ಎಂದು ಎಚ್ಚರಿಸುವ ಉದ್ದೇಶದಿಂದಲೇ ಹೌದು. ಬೇವು–ಬೆಲ್ಲಗಳನ್ನು ಸೇವಿಸುತ್ತ ನಾವು ಇಂದು ಪ್ರಾರ್ಥಿಸಿಕೊಳ್ಳುವುದು – ನೂರು ವರ್ಷಗಳ ಆರೋಗ್ಯ ಪೂರ್ಣ ಜೀವನಕ್ಕಾಗಿ, ಎಲ್ಲ ಸಂಪತ್ತುಗಳ ಪ್ರಾಪ್ತಿಗಾಗಿ ಎಂಬುದನ್ನು ಮರೆಯಬಾರದು.

# ಮಹಿಳೆಯ ಬದುಕೇ ಸ್ವಾವಲಂಬನೆಗೆ ಪ್ರತೀಕ

– ಶ್ರೀಮತಿ ಸುನೀತ ಕೊಡ್ಲೇರ್, ಉಪಾಧ್ಯಕ್ಷರು, ಪ್ರಗತಿ ಮಹಿಳಾ ಸಹಕಾರಿ ಸಂಘ, ಹಿರೇಕೇರೂರು, ಹಾವೇರಿ ಜಿಲ್ಲೆ



ಪ್ರತಿ ಕುಟುಂಬಗಳಲ್ಲಿ ಹೆಣ್ಣು ಅದೆಷ್ಟು ಮುಖ್ಯವಾಗುತ್ತಾಳೆ. ಆಕೆ ವಹಿಸದ ಪಾತ್ರವಿಲ್ಲ. ಅಮ್ಮ, ತಂಗಿ, ಅಕ್ಕ, ಹೆಂಡತಿ, ಗೆಳತಿ ಹೀಗೆ ಎಲ್ಲಾ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸುವ ಹೆಣ್ಣಿನ ಬದುಕಿನಲ್ಲಿ ಸ್ವಾವಲಂಬನೆ ಎನ್ನುವುದು ಅದೆಷ್ಟರ ಮಟ್ಟಿಗೆ ಮಿಳಿತವಾಗಿದೆ. ಸ್ವಾವಲಂಬನೆಯ ಬದುಕಿನಲ್ಲಿ ಹೆಣ್ಣೊಬ್ಬಳು ಅದೆಷ್ಟು ಸ್ವ–ಅವಲಂಬಿಯಾಗಿ ಸಂಕಷ್ಟಗಳನ್ನೆಲ್ಲಾ ಎದುರಿಸಬಲ್ಲಳು ಎನ್ನುವ ಚಿಕ್ಕದೊಂದು ಚಿತ್ರಣ ಇಲ್ಲಿದೆ. ಮಹಿಳೆ ಪ್ರತಿ ಮನೆಯಲ್ಲೂ ಈ ಪಾತ್ರಕ್ಕೊಂದು ಪ್ರತ್ಯೇಕ ಮಹತ್ವ ಇದ್ದೇ ಇರುತ್ತದೆ. ಅಮ್ಮ, ತಂಗಿ, ಅಕ್ಕ, ಹೆಂಡತಿ, ಗೆಳತಿ ಹೀಗೆ 'ನಾನಾ ಪಾತ್ರಗಳಲ್ಲಿ ಬದುಕಿನ ಅನಿವಾರ್ಯ ಸ್ಥಾನವನ್ನು ನಿಭಾಯಿಸುವ ಮಹಿಳೆಯ ಅಸ್ತಿತ್ವವೇ ಅನೇಕ ಸಂಕೋಲೆಗಳಿಂದ ನಿರ್ಮಾಣಗೊಂಡಿದೆ. ಕುಟುಂಬದ ಒಂದಿಲ್ಲೊಂದು ಪಾತ್ರವನ್ನು ಸಮರ್ಥವಾಗಿ ನಿಭಾಯಿಸುವ ಮಹಿಳೆ ತನ್ನದೇ ಆದ ಪ್ರಪಂಚದಲ್ಲಿ ಸ್ವತಂತ್ರವನ್ನು ನಿರೀಕ್ಷಿಸುತ್ತಾಳೆ. ಯಾವುದೇ ಅಡೆತಡೆಯನ್ನು ಮೆಟ್ಟಿ ನಿಂತು ಮುನ್ನೆಡೆಯಲು ಇಚ್ಛಿಸುತ್ತಾಳೆ. ಇಂಥಹಾ, ಮಹಿಳೆಗೆ ತನ್ನ ಕಷ್ಟಗಳನ್ನೆಲ್ಲಾ ಎದುರಿಸಿ, ಸದೃಢವಾಗಿ ನಿಲ್ಲಲು ಜೊತೆಯಾಗುವುದೇ ಸ್ವಾವಲಂಬನೆ.

ಸ್ವಾವಲಂಬನೆ ಎಂದರೆ ಸ್ವ ಅವಲಂಬನೆ. ಅದು ಅಹಂಕಾರವಲ್ಲ. ಹಾಗೆಂದ ಮಾತ್ರಕ್ಕೆ ಅದು ಒಬ್ಬರೇ ಜೀವಿಸುವುದೂ ಅಲ್ಲ. ಯಾರೊಬ್ಬರಿಗೂ ಹೊರೆಯಾಗದೇ ಬದುಕುವುದು ಎಂದರ್ಥ, ಸಾಮಾಜಿಕವಾಗಿ, ಕೌಟುಂಬಿಕವಾಗಿ ಸ್ತ್ರೀ ಎಂದರೆ ಸ್ವಾವಲಂಬನೆ. ಸ್ವಾವಲಂಬನೆ ಎಂದರೆ ಸ್ತ್ರೀ. ಆಕೆಯ ಬದುಕೇ ಹಾಗೆ. ಎಲ್ಲರೊಂದಿಗೆ ಬದುಕುತ್ತಾಳೆ. ಯಾರನ್ನೂ ಅವಲಂಬಿಸದೇ ಜೀವಿಸುತ್ತಾಳೆ. ಬದುಕನ್ನು ಕಟ್ಟಿಕೊಳ್ಳುವಲ್ಲಿ ಆಕೆ ಸ್ವತಃ ಅನೇಕಾನೇಕ ಸಂಕಷ್ಟಗಳನ್ನು ಎದುರಿಸುತ್ತಾಳೆ. ಅದೆಷ್ಟೇ ಕಷ್ಟವಿದ್ದರೂ, ಇಷ್ಟಪಟ್ಟು ಬದುಕುತ್ತಾಳೆ. ಚಿಕ್ಕವಳಿದ್ದಾಗ ತಂದೆಯ ಆಶ್ರಯದಲ್ಲಿ ಬೆಳೆದ ಮಗಳು, ದೊಡ್ಡವಳಾಗುತ್ತಾ ಜವಾಬ್ದಾರಿಯನ್ನು ಮೈಗೂಡಿಸಿಕೊಂಡು ಬದುಕುತ್ತಾಳೆ. ತನ್ನ ತಾಯಿಯಿಂದ ಕಷ್ಟಗಳನ್ನು ಎದುರಿಸಿ, ಬದುಕು ಕಟ್ಟಿಕೊಳ್ಳುವುದು ಹೇಗೆನ್ನುವ ಪಾಠವನ್ನು ಕಲಿಯುತ್ತಾಳೆ. ಜೊತೆಗೆ, ಮನೆ ಕೆಲಸಗಳನ್ನು ಕಲಿಯುವುದರ ಜೊತೆಗೆ, 'ಸ್ವ–ಅವಲಂಬಿ' ಆಗಿ ಬದುಕುವುದನ್ನು ಕರಗತ ಮಾಡಿಕೊಳ್ಳುತ್ತಾಳೆ. ಆನಂತರ ಈ ಜವಾಬ್ದಾರಿ ಅಭ್ಯಾಸ, ಹವ್ಯಾಸವಾಗಿ ರೂಢಿಸಿಕೊಂಡು, ನಿತ್ಯದ ಮನೆಯ ಹೊಣೆಗಳನ್ನೆಲ್ಲಾ ಸಮರ್ಥವಾಗಿ ಎದುರಿಸಿ ನಡೆಯುತ್ತಾಳೆ. ದಿನಕಳೆದಂತೆ ಚಿಕ್ಕ ಹುಡುಗಿ, ಪ್ರಾಯಕ್ಕೆ ಬಂದು ಪೋಷಕರಿಗೆ ಮದುವೆಯ ನೆನಪನ್ನು ಮಾಡಿಸುತ್ತಾಳೆ. ಆ ನಂತರ ಮನೆಯವರೇ ಸೂಚಿಸುವ ಮದುವೆ ಎಂಬ ಸುಂದರ ಬಂಧನಕ್ಕೆ ಸಿಲುಕುತ್ತಾಳೆ. ಮದುವೆ ಬಳಿಕ ಬೇರೊಬ್ಬರ ಮನೆಯನ್ನು ತನ್ನದೆಂದೇ ಸ್ವೀಕರಿಸಿ ಬದುಕುತ್ತಾಳೆ. ಬೇರೆಯವರನ್ನು ತನ್ನವರೆಂದು ಜೀವಿಸುತ್ತಾಳೆ. ಪ್ರಕೃತಿಯೇ ದೊಡ್ಡದು ಹಾಗೂ ವಿಚಿತ್ರವೆನ್ನುತ್ತೇವೆ. ಈ ಪ್ರಕೃತಿಯಲ್ಲಿ ಹೆಣ್ಣಿನ ಬದುಕೆಷ್ಟು ವಿಚಿತ್ರಗೊತ್ತೇ? ಬದುಕು ಮತ್ತಷ್ಟು ವಿಚಿತ್ರ. ಅಪರಿಚಿತರೊಂದಿಗೆ ಮಾತನಾಡಲೇ ಯೋಚಿಸುವ ದಿನಗಳಲ್ಲೂ ಹೆಣ್ಣಿನ ಬದುಕಿನಲ್ಲಿ ಅನೇಕಾನೇಕ ಅನಿರೀಕ್ಷಿತ ಘಟನೆಗಳು ಘಟಿಸುತ್ತವೆ. ಹುಟ್ಟಿ ಬೆಳೆದ, ಆಡಿ ನಲಿದ ಮನೆ ಮದುವೆಯಾದ ನಂತರ ಯಾರದ್ದೋ ಮನೆಯಾಗುತ್ತದೆ. ಆ ಮನೆಗೆ ಅದೇ ಮಗಳು ಕೇವಲ ಅತಿಥಿ ಅಷ್ಟೇ.

ಪುರಾಣಗಳಲ್ಲಿ ಕಾಳಿಯ ರೌದ್ರಕ್ಕೆ ಆ ಶಿವನೇ ತಲೆಬಾಗಿದ ಕತೆಯನ್ನು ಪ್ರಸ್ತಾಪಿಸುತ್ತಾರೆ. ಹೆಣ್ಣನ್ನು ಶಿವನೇ ತನ್ನ ತಲೆಯ ಮೇಲಿಟ್ಟುಕೊಂಡ ಕತೆಯನ್ನು ಅನೇಕಾನೇಕ ರೀತಿ ವೈಭವಿಸಿ ವಿವರಿಸುತ್ತಾರೆ. ಮತ್ತೊಂದು ಕಡೆ ಪ್ರಕೃತಿಯನ್ನೇ ಹೆಣ್ಣಿಗೆ ಹೋಲಿಸುತ್ತಾರೆ. ಪ್ರಕೃತಿಯಲ್ಲಿ ಹಸಿರಿಗೆ, ನೀರಿಗೆ, ಜ್ವಾಲೆಗೂ ಹೆಣ್ಣೆಂದು ಗುರುತಿಸಿ, ಗೌರವಿಸುತ್ತಾರೆ. ಹೆಣ್ಣು ತಾಳ್ಮೆಯ ಪ್ರತಿ–ರೂಪವೆನ್ನುತ್ತಾರೆ. ಹೀಗೆ, ಎಲ್ಲೆಲ್ಲೂ ಮಹತ್ತರ ಸ್ಥಾನ ಪಡೆದಿರುವ ಹೆಣ್ಣು ಮತ್ತೊಬ್ಬರ ಮೇಲೆ ಅವಲಂಬಿಸಬೇಕೆನ್ನುವ ಅಂಶವೇ ವಿಚಿತ್ರ. ಈ ಅವಲಂಬನೆಗೂ, ಸ್ವಾವಲಂಬನೆ ಎನ್ನುವ ಪದಕ್ಕೂ ಇರುವ ಒಳಾರ್ಥದ ವಿವರಣೆಯೇ ಈ ಲೇಖನ. ಮನೆ ತನ್ನದೆಂದು ಹೊಂದಿಕೊಂಡು ಬದುಕುವ ಹೆಣ್ಣಿಗೆ ಸ್ವಾಭಿಮಾನವೇ ಸೂತ್ರವಾಗಿರುತ್ತದೆ. ಸ್ವಾವಲಂಬನೆಯೇ ಘನತೆಯಾಗಿರುತ್ತದೆ. ಒಬ್ಬ ಕೆಲಸದಾಕೆ. ಮುಂಜಾನೆ 6 ಗಂಟೆಗೆ ಮನೆ ಬಿಟ್ಟರೆ ಸಂಜೆ ಹೊತ್ತಿಗೆ ಹಿಂತಿರುಗಿ ಬರೋದು. ಮನೆ ಮನೆಯಲ್ಲಿ ಬಟ್ಟೆ ಒಗೆಯೋದು, ಪಾತ್ರ ತೊಳೆಯೋದು, ನೆಲ ಗುಡಿಸಿ, ಒರೆಸೋದು ಆಕೆಯ ಕೆಲಸ. 8 ಮನೆಗಳಲ್ಲಿ ತಿಂಗಳಿಗೆ ಆರು ಸಾವಿರದಂತೆ ಒಟ್ಟು 48,000 ಸಂಬಳ ಆಕೆಯದ್ದು. ಪ್ರಾರಂಭದಲ್ಲಿ ಗುಡಿಸಲಿನಲ್ಲಿ ವಾಸವಾಗಿದ್ದ ಆಕೆ 10–15 ವರ್ಷಗಳ ನಿರಂತರ ದುಡಿಮೆಯಿಂದಾಗಿ ಸ್ವಂತ ಮನೆ ಕಟ್ಟಿಕೊಂಡು ಬಾಡಿಗೆಗೆ ಮನೆಗಳನ್ನು ನೀಡುವಷ್ಟು ಬೆಳೆದು ಬಿಡುತ್ತಾಳೆ. ಇದರ ಪ್ರತಿಫಲವಾಗಿ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ವಿದೇಶದಲ್ಲಿ ಎಮ್.ಎಸ್ಸಿ ಓದಿಸುವ ಮೂಲಕ ಬದುಕಿನಲ್ಲಿ ಸಂತೃಪ್ತಿಯನ್ನು ಕಾಣುತ್ತಾಳೆ. ಇದು ಇತ್ತೀಚೆಗೆ ನಾನು ಓದಿದ್ದ ನೈಜ ಘಟನೆ.

ಶೂನ್ಯದಿಂದ ಆರಂಭವಾಗಿ ಬದುಕು ಕಟ್ಟಿಕೊಳ್ಳುತ್ತ ಸಾಗುವುದು ಒಂದು ದೊಡ್ಡ ಸಾಹಸ. ಪ್ರಬಲ ಇಚ್ಛಾಶಕ್ತಿ ಹಾಗೂ ಬೆಂಬಿಡದ ಛಲ ಇಲ್ಲಿ ಕೆಲಸ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 28
Licensed to post without Prepayment License No. PMG BG/WPP-384/2023-2025.



ಮಾಡಿದ್ದಂತೂ ಸುಳ್ಳಲ್ಲ. ದಿನದ ಎಲ್ಲಾ ಗಂಟೆಗಳನ್ನು ಅಡುಗೆ ಮನೆಗೆ ಸೀಮಿತಗೊಳಿಸುವ ಮಹಿಳೆ ಕೊಂಚ ಮನಸ್ಸು ಮಾಡಿದಲ್ಲಿ ತನ್ನ ಕನಸುಗಳನ್ನು ನೆರವೇರಿಸುವ ಅದೆಷ್ಟೋ ಅವಕಾಶಗಳಿವೆ. ತನ್ನ ಇಷ್ಟದ ಅಥವಾ ಯಾವುದಾದರೊಂದು ಕ್ಷೇತ್ರದಲ್ಲಿ ಪರಿಣಿತಿ ಹೊಂದಬೇಕು ಅಥವಾ ಹೊಂದಿದ್ದರೆ ಚೆನ್ನಾಗಿರುತ್ತಿತ್ತು ಅನಿಸಬೇಕಾದರೆ ನಾವು ಪ್ರಪಂಚ ನೋಡಬೇಕು. ಅಥವಾ ನಮ್ಮ ಕಂಫರ್ಟ್ ಝೋನ್ ನಿಂದ ಹೊರಗೆ ಬರಬೇಕು. ಈ ಅನುಭವ ಪ್ರಾರಂಭದಲ್ಲಿ ನನಗೂ ಆಗಿತ್ತು. ನಾನು ನೋಡಿದ ಪ್ರಕಾರ ಮನೆಯಲ್ಲಿ ಸುಮ್ಮನೆ ಕೂತು ಕಾಲಕಳೆಯುವ ಮಹಿಳೆಯರೇ ಕಡಿಮೆ. ಒಂದಾ ವೃತ್ತಿ ಇಲ್ಲವೇ ಕಲಿಕೆ. ಒಂದಲ್ಲಾ ಒಂದು ವಿಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರೇ ಹೆಚ್ಚು.

ಸಣ್ಣ ಮಟ್ಟದಲ್ಲಿ ಆರಂಭಿಸಿದ್ದ ಓರ್ವ ಗೆಳತಿಯಂತೂ ರೆಸ್ಟೋರೆಂಟ್ ಇಡುವಷ್ಟು ತನ್ನ ವ್ಯಾಪಾರವನ್ನು ವಿಸ್ತರಿಸಿದ್ದಾರೆ. ಇನ್ನು ಕೆಲವರು ಬ್ಯೂಟಿಶಿಯನ್ ವೃತ್ತಿಯಲ್ಲೂ ತೊಡಗಿದ್ದಾರೆ. ಅದಕ್ಕೆ ಬೇಕಾದ ಎಲ್ಲಾ ವಸ್ತುಗಳನ್ನು ಹೊಂದಿಸುವ ಮೂಲಕ ಕಾರ್ಯನಿರತರಾಗಿದ್ದಾರೆ. ಯೋಗ, ಡ್ರಾಯಿಂಗ್, ಟೈಲರಿಂಗ್, ಡ್ಯಾನ್ಸ್ ತರಗತಿಗಳನ್ನು ವಾರವಿಡೀ ನಡೆಸುತ್ತಾ ಕುಟುಂಬವನ್ನು ನಿರ್ವಹಿಸುತ್ತಾ ಸಾಗುತ್ತಿದ್ದಾರೆ ಮತ್ತೆ ಕೆಲವರು. ಆಸಕ್ತಿ ಇರೋ ಮಕ್ಕಳು, ಮಹಿಳೆಯರು ತಮ್ಮ ಅನುಕೂಲಕ್ಕೆ ತಕ್ಕಂತೆ ಸಮಯಗಳನ್ನು ಹೊಂದಿಸಿ ಇವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ಕೊಂಚ ಪರಿಶ್ರಮಪಟ್ಟಲ್ಲಿ ಇಂತಹ ವಿದ್ಯೆಗಳಲ್ಲಿ ಪರಿಣತಿ ಆಗೋದು ಏನು ಕಷ್ಟವಿಲ್ಲ. ಅದರಲ್ಲೂ ಮನೆ – ಮಕ್ಕಳ ಜವಾಬ್ದಾರಿಗಳಿಂದಲೂ ತಪ್ಪಿಸಿಕೊಳ್ಳಲಾಗದೆ, ಇತ್ತ ತಾನು ಏನಾದ್ರೂ ಸಾಧನೆ ಮಾಡಬೇಕು ಅನ್ನುವವರಿಗೆ ಇಂತಹ ವೃತ್ತಿಗಳು ಖಂಡಿತ ಸಹಾಯಕ್ಕೆ ಬರಲಿವೆ. Bend in the road is not the end of the road ಎಂಬ ಮಾತಿನ ಹಾಗೆ ಇರುವ ಪರಿಸ್ಥಿತಿಗೆ ಗೊಣಗದೆ, ಅಲ್ಲಿದ್ದುಕೊಂಡೇ ಆಸಕ್ತಿದಾಯಕ ವಿಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಲ್ಲಿ ಮುಂದಿನ ದಿನಗಳಲ್ಲಿ ಪಶ್ಚಾತಾಪ ಪಡುವ ಪ್ರಮೇಯ ಎದುರು ನೋಡಬೇಕಾಗಿಲ್ಲ.

ಛಲವಿದ್ದರೆ ಯಾರೂ ಎಲ್ಲೂ ಬೇಕಾದರೂ ಬದುಕಬಹುದು. ಅಂತಹ ಶಕ್ತಿ ನಮ್ಮಲ್ಲೇ ಇರುತ್ತದೆ. ಆದರೆ ತುಂಬಾ ಬೇಗ ಭಯ ಪಡೋದು, ಸೋತೆವು ಅಂದುಕೊಳ್ಳೋದು, ಇತರರ ಅಭಿಪ್ರಾಯಗಳ ಬಗ್ಗೆ ಚಿಂತಿಸೋದು, ಒತ್ತಡಕ್ಕೆ ಸಿಲುಕಿ ಒದ್ದಾಡುವ ಮೂಲಕ ಈ ಆಲೋಚನೆಗಳು ಕೆಲವೊಮ್ಮೆ ನಮ್ಮ ಶಕ್ತಿಯನ್ನೇ ಅಡಗಿಸಿಬಿಡುತ್ತವೆ.

ನಾವು ಆರಂಭಿಸುವ ಯಾವುದೇ ಕಾರ್ಯಕ್ಕೆ ರಾತ್ರಿ ಬೆಳಗಾಗೋದರಲ್ಲಿ ಫಲಿತಾಂಶ ಬಯಸೋದು ಮೂರ್ಖತನ. ಸಾಧನೆ ಅನ್ನೋದು ನಿರಂತರ ಪರಿಶ್ರಮದ ಪರಿಣಾಮವೇ. ಏನಾದರೂ ಸಾಧನೆ ಮಾಡಬೇಕೆಂದು ಹೇಳುತ್ತಾ ಸುಮ್ಮನೆ ಕುಳಿತರೂ ಶೂನ್ಯವೇ ಉತ್ತರ. ತಡವೇಕೆ, ಟೀಕೆಗಳನ್ನು ಅನುಭವಿಸಿದರೂ, ಕಷ್ಟಗಳನ್ನು ಎದುರಿಸಿದರೂ ನಮ್ಮಲ್ಲಿ ನಾವು ನಂಬಿಕೆ ಕಳೆದುಕೊಳ್ಳದೆ ಸಾಧನೆ ಮಾಡಲೇಬೇಕೆಂಬ ಹಸಿವನ್ನು ಸದಾ ಜಾಗೃತಗೊಳಿಸಿದಲ್ಲಿ ಯಶಸ್ಸು ಖಂಡಿತ. ಹೆಣ್ಣಿನ ಬದುಕಿಗೆ ಸ್ವಾವಲಂಬನೆ ಕೊಡುಗೆಯು ಅಂಥಹಾ ಹೆಣ್ಣುಮಗಳೊಬ್ಬಳ ಜೀವನದ ಕತೆಯಲ್ಲ, ಹೆಣ್ಣು ಕುಲದ ಎಷ್ಟೋ ಮಹಿಳೆಯರ ಜೀವನದ ಪ್ರತಿರೂಪ. ಮದುವೆಯಾದ ಅದೆಷ್ಟೋ ಹೆಣ್ಣು ಮಕ್ಕಳು ತನ್ನ ಗಂಡನನ್ನು ಕಳೆದುಕೊಂಡು ಸ್ವತಃ ದುಡಿದು ಜೀವನ ಮುನ್ನಡೆಸುತ್ತಿದ್ದಾರೆ. ಮಕ್ಕಳನ್ನು ಕಷ್ಟವಿದ್ದರೂ ಓದಿಸಿ, ಅವರಿಗೆ ಘನತೆಯ ಬದುಕನ್ನು ಸೃಷ್ಟಿಸಿಕೊಡುತ್ತಿದ್ದಾರೆ. ಗಂಡಿಲ್ಲದೆ ಒಂದು ಹೆಣ್ಣಿನ ಜೀವನವೇ ನಡೆಯದು ಎನ್ನುವ ಅವಶ್ಯಕತೆಯಿಲ್ಲ. ಜೊತೆಯಾಗಿ ನಡೆಸುವ ಒಂದು ಕೈ ಅಗತ್ಯವಿದೆಯಷ್ಟೇ. ಆ ಕೈ ಗಂಡಿನದೇ ಆಗಿರಬೇಕು ಅಥವಾ ಒಂದು ಹೆಣ್ಣಿನದೇ ಆಗಿರಬೇಕು ಎಂದೇನಿಲ್ಲ. ಅರ್ಥ ಮಾಡಿಕೊಂಡು ಜೊತೆ ನಡೆಯುವವರು ಯಾರಾದರೂ ಸರಿಯೇ. ಮದುವೆಯಾದರೂ ಸರಿಯೇ, ತನ್ನನ್ನು ನೋಡಿಕೊಳ್ಳುವಷ್ಟು ದುಡಿದು ಬದುಕುತ್ತಾಳೆ. ಹೆಣ್ಣು ಸ್ವಾವಲಂಬನೆಯ ಪ್ರತಿರೂಪ. "ಪ್ರಮುಖಾಂಶಗಳು ಹೆಣ್ಣು ತಾಳ್ಮೆಯ ಪ್ರತಿ–ರೂಪ. ಬದುಕಿನಲ್ಲಿ ಹೆಚ್ಚಿನ ಪಾತ್ರಗಳಿಗೆ ಜೀವ ನೀಡುತ್ತಾಳೆ. ಆದರೆ, ಈ ಮಹತ್ವದ ಪಾತ್ರಕ್ಕೆ ಅವಲಂಬನೆಯೆನ್ನುವ ಚೌಕಟ್ಟನ್ನು ಸೃಷ್ಟಿಸಿದ್ದಾರೆ. ಯಾವುದೇ ಚೌಕಟ್ಟಿನ ಅಗತ್ಯವಿಲ್ಲದೇ ಸ್ವಂತ ಬಲದ ಬದುಕನ್ನು ಹೆಣ್ಣು ಕಟ್ಟಿಕೊಳ್ಳಬಲ್ಲಳು. ಇದಕ್ಕೆ, ಅತ್ಯಂತ ಸಮರ್ಥ ಉದಾಹರಣೆ, "ನಮ್ಮ ನಿಮ್ಮ ಮನೆಯ ಮಹಿಳೆ/ಹೆಣ್ಣಿನ ಬದುಕು!"

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003